ವಿಷಯ : ಜಿಲ್ಲಾ ಹಾಲು ಒಕ್ಕೂಟ ಸಹಕಾರ ಸಂಘಗಳಲ್ಲಿ 15,000 ಮೆಟ್ರಿಕ್ ಟನ್ ಹಾಲಿನ ಪುಡಿ ದಾಸ್ತಾನಿರುವುದರಿಂದ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿರುವ ಬಗ್ಗೆ.

*****

ಅಧ್ಯಕ್ಷರು:– ಮಂತ್ರಿಗಳು ಸದನದಲ್ಲಿ ಇದ್ದಾರೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಮಂತ್ರಿಗಳು ಇಲ್ಲ.

ಅಧ್ಯಕ್ಷರು:– ಮತ್ತೆ ಈಗ ಉತ್ತರ ಹೇಳುವವರು ಯಾರು?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಷಯ, ಬೇಕಾದರೆ ನಾಳೆಗೆ ಅವಕಾಶ ಕೊಡಿ. ನಾಳೆ ಬೆಳಗ್ಗೆಗೇ ಮಾತನಾಡುತ್ತೇನೆ. ಈಗ ನಾನು ಮಾತನಾಡುವುದಕ್ಕೆ ರೆಡಿ ಇದ್ದೇನೆ.

ಅಧ್ಯಕ್ಷರು:– ನೋಡಿ, ಇಲ್ಲಿ ವಿಪರೀತ ವಿಷಯಗಳಿವೆ. ಆಯಿತು, ತಾವು ಮಾತನಾಡಿ. ಉತ್ತರ ಬೇಕಾದರೆ ಅವರು ನಾಳೆ ಹೇಳುತ್ತಾರೆ. ನೀವು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾತನಾಡಲೇ ಅಧ್ಯಕ್ಷರೆ...

ಅಧ್ಯಕ್ಷರು:– ಸಹಕಾರಿ ಮತ್ತು ಸಕ್ಕರೆ ಸಚಿವರು ಸದನದಲ್ಲಿ ಇದ್ದಾರಲ್ಲ. ಈ ವಿಷಯ ಯಾರ ವ್ಯಾಪ್ತಿಗೆ ಬರುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಪಶುಸಂಗೋಪನಾ ಸಚಿವರಾದ ಜಯಚಂದ್ರರವರ ವ್ಯಾಪ್ತಿಗೆ ಬರುತ್ತದೆ. ಜಯಚಂದ್ರರವರು ಇರಬೇಕಾಗಿತ್ತು.

ಅಧ್ಯಕ್ಷರು:– ಈಗ ಸಹಕಾರಿ ಸಚಿವರು ಇದ್ದಾರೆ, ನೀವು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ 13 ಹಾಲಿನ ಒಕ್ಕೂಟಗಳಿವೆ. ಇದರಿಂದ ಪ್ರತಿನಿತ್ಯ 72 ಲಕ್ಷ ಲೀಟರ್ ಹಾಲು ಬರುತ್ತಿದ್ದು,

ಈ ಪೈಕಿ ಸುಮಾರು 26 ಲಕ್ಷ ಲೀಟರ್ ಹಾಲನ್ನು ನಾವು ಪರಿವರ್ತನೆಗೋಸ್ಕರ ಕಳುಹಿಸಿಕೊಡುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ಹಾಲು ಒಕ್ಕೂಟದಲ್ಲಿ 15 ಲಕ್ಷದ 20 ಸಾವಿರ ಲೀಟರ್ ಹಾಲು ಶೇಖರಣೆಯಾಗುತ್ತಿದ್ದು, 10 ಲಕ್ಷ 33 ಸಾವಿರ ಲೀಟರ್‌ಗಳಷ್ಟು ಹಾಲು ಮಾರಾಟವಾಗುತ್ತದೆ ಮತ್ತು ಹೆಚ್ಚಿಗೆ ಹಾಲು 4 ಲಕ್ಷ 92 ಸಾವಿರ ಲೀಟರ್‌ಗಳಷ್ಟು ಆಗುತ್ತದೆ. ಕೋಲಾರದಲ್ಲಿ 9 ಲಕ್ಷ 50 ಸಾವಿರ ಲೀಟರ್ ಹಾಲು ಶೇಖರಣೆಯಾಗುತ್ತಿದ್ದರೆ, ಮಾರಾಟವಾಗುವುದು 5 ಲಕ್ಷದ 25 ಸಾವಿರ ಲೀಟರ್ ಮತ್ತು ಸುಮಾರು 4 ಲಕ್ಷ 25 ಸಾವಿರ ಲೀಟರ್ ಹಾಲನ್ನು conversion ಗೆ ಕಳುಹಿಸುತ್ತಿದ್ದಾರೆ. ಮಂಡ್ಯದಲ್ಲಿ 7 ಲಕ್ಷ ಲೀಟರ್ ಹಾಲಿನ ಪೈಕಿ 3 ಲಕ್ಷ 46 ಸಾವಿರ ಲೀಟರ್ ಹಾಲು ಮಾರಾಟವಾಗುತ್ತಿದ್ದು ಬಾಕಿ ಉಳಿದ 4 ಲಕ್ಷ ಚಿಲ್ಲರೆ ಲೀಟರ್‌ನಷ್ಟು ಹಾಲನ್ನು conversion ಗೆ ಕಳುಹಿಸುತ್ತಿದ್ದಾರೆ. ಹಾಸನದಲ್ಲಿ 8 ಲಕ್ಷ 20 ಸಾವಿರ ಲೀಟರ್ ಶೇಖರಣೆಯಾಗುತ್ತಿದ್ದು ಈ ಪೈಕಿ 1 ಲಕ್ಷ 72 ಸಾವಿರ ಮಾತ್ರ ಮಾರಾಟವಾಗುತ್ತಿದ್ದು, ಬಾಕಿ 6 ಲಕ್ಷ 98 ಸಾವಿರ ಲೀಟರ್ ಹಾಲು conversion ಗೆ ಹೋಗುತ್ತಿದೆ. ಇದೇ ರೀತಿ ಮೈಸೂರಿನಲ್ಲಿ 8 ಲಕ್ಷ 40 ಸಾವಿರ ಲೀಟರ್ ಹಾಲು ಶೇಖರಣೆಯಾಗುತ್ತಿದ್ದು, 5 ಲಕ್ಷ 32 ಸಾವಿರ ಲೀಟರ್ ಹಾಲು conversion ಗೆ ಹೋಗುತ್ತಿದೆ. ತುಮಕೂರಿನಲ್ಲಿ 6 ಲಕ್ಷ 95 ಸಾವಿರ ಲೀಟರ್‌ನಷ್ಟು ಹಾಲು ಶೇಖರಣೆಯಾಗುತ್ತಿದ್ದು, 2 ಲಕ್ಷ 77 ಸಾವಿರ ಲೀಟರ್ ಮಾರಾಟವಾಗುತ್ತಿದ್ದು 4 ಲಕ್ಷ 18 ಸಾವಿರ ಲೀಟರ್ ಹಾಲು conversion ಗೆ ಹೋಗುತ್ತಿದೆ. ಶಿವಮೊಗ್ಗದಲ್ಲಿ 4 ಲಕ್ಷ 35 ಸಾವಿರ ಲೀಟರ್ ಹಾಲು ಶೇಖರಣೆಯಾಗುತ್ತಿದ್ದು, 2 ಲಕ್ಷ 16 ಸಾವಿರ ಲೀಟರ್ ಹಾಲು ಮಾರಾಟವಾಗುತ್ತಿದ್ದು ಉಳಿಕೆ 2 ಲಕ್ಷ 19 ಸಾವಿರ ಲೀಟರ್ ಹಾಲು conversion ಗೆ ಹೋಗುತ್ತಿದೆ. ಅದೆ ರೀತ ಧಾರವಾಡ, ರಾಯಚೂರು, ಬಳ್ಳಾರಿ, ಬೆಳಗಾವಿ ಎಲ್ಲಾ ಕಡೆಗಳಿಂದ ಪ್ರತಿನಿತ್ಯ ಸುಮಾರು 26 ಲಕ್ಷ ಲೀಟರಾಗಳಷ್ಟು ಹಾಲು conversion ಗ ಹೋಗುತ್ತದ. ಒಂದು ಲೀಟರ್ ಹಾಲಿನ conversion ಗೆ 7 ರಿಂದ 8 ರೂಪಾಯಿಗಳಷ್ಟು ವೆಚ್ಚ ಬರುತ್ತದೆ. ಇದರಿಂದ ಕೆಲವು ಒಕ್ಕೂಟಗಳಲ್ಲಿ ಮತ್ತು ಬೆಂಗಳೂರು ಹಾಲಿನ ಒಕ್ಕೂಟ

ಒಂದರಲ್ಲೇ ಏಪ್ರಿಲ್, ಮೇ ತಿಂಗಳಲ್ಲಿ 4 ಕೋಟಿ 90 ಲಕ್ಷ ನಷ್ಟವಾಗಿದೆ. ಅದೇ ರೀತಿ ಕೋಲಾರದಲ್ಲಿ 4 ಕೋಟಿ 72 ಲಕ್ಷ ನಷ್ಟವಾಗಿದೆ. ಹಾಸನದಲ್ಲಿ 4 ಕೋಟಿ 18 ಲಕ್ಷ, ಮೈಸೂರಿನಲ್ಲಿ 27 ಲಕ್ಷ, ಮಂಡ್ಯದಲ್ಲಿ 2 ಕೋಟಿ 9 ಲಕ್ಷ ಹೀಗೆ ಎಲ್ಲಾ ಸೇರಿ ಒಟ್ಟು 150 ಕೋಟಿ ನಷ್ಟ ಇಲ್ಲಿವರೆಗೆ ಆಗಿದೆ.

ಇದಲ್ಲದೆ, 26 ಲಕ್ಷ ಲೀಟರ್ ಹಾಲನ್ನು ಇಲ್ಲೇ conversion ಮಾಡುವುದಿಲ್ಲ. ಸುಮಾರು 1500 ಕಿ.ಮೀ. ದೂರಕ್ಕೆ ಕಳುಹಿಸಬೇಕಾಗುತ್ತದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಅಥವಾ ಚೆನ್ನೈ ಹೀಗೆ ಸುಮಾರು 26 ಲಕ್ಷ ಲೀಟರ್ ಹಾಲನ್ನು conversion ಮಾಡುತ್ತಿದ್ದಾರೆ. ಈ ರೀತಿ conversion ಮಾಡುವುದರಿಂದ ಪ್ರತಿನಿತ್ಯ 200 ಮೆಟ್ರಿಕ್ ಟನ್ ಹಾಲಿನ ಪುಡಿ ಮತ್ತು 125 ಮೆಟ್ರಿಕ್ ಟನ್ ಬೆಣ್ಣೆ ತಯಾರಾಗುತ್ತಿದೆ. ಇವತ್ತಿನವರೆಗೆ 18 ಸಾವಿರ ಟನ್‌ಗಳಷ್ಟು ಹಾಲಿನ ಪುಡಿ stock ನಲ್ಲಿದೆ. ಒಂದು ಕೆ.ಜಿ. ಹಾಲಿನ ಪುಡಿ ತಯಾರು ಮಾಡಬೇಕಾರೆ 230 ರೂಪಾಯಿ ಬೇಕಾಗುತ್ತದೆ. ಅದೇ ಮಾರುಕಟ್ಟೆಯಲ್ಲಿ 120 ರೂಪಾಯಿಗಳ ದರವಿದೆ. ಒಂದು ಒಕ್ಕೂಟದಲ್ಲಿ ಸುಮಾರು ಒಂದು ಕೆ.ಜಿ. ಗೆ 120 ರೂಪಾಯಿಯಂತೆ 450 ಕೋಟಿ ರೂಪಾಯಿ ನಷ್ಟವಾಗುವಂಥ ಸನ್ನಿವೇಶವಿದೆ. ಈ ವಿಚಾರವನ್ನು ಕೇಳಲು ಇಲ್ಲಿ ಮಾನ್ಯ ಪಶುಸಂಗೋಪನಾ ಮಂತ್ರಿಗಳಿರಬೇಕಾಗಿತ್ತು. ಏಕೆಂದರೆ, ಇವತ್ತೇನು ಕಬ್ಬಿನ ಸಮಸ್ಯೆಯಿದಯೋ ಅದಕ್ಕಿಂತ ಹೆಚ್ಚಾಗಿ ಹಾಲಿನ ಸಮಸ್ಯೆಯಿದೆ. ಬೆಂಗಳೂರು, ಕೋಲಾರ, ಹಾಸನ, ತುಮಕೂರು ಹೀಗೆ ನೀರಾವರಿ ಇಲ್ಲದೇ ಇರುವ ಪ್ರದೇಶದಲ್ಲಿಯೂ ಸಹ ರೈತರು ಹಾಲು ಉತ್ಪಾದನೆ ಮಾಡಿ ಬದುಕುವಂಥ ದಾರಿಯಿದೆ. ಆದ್ದರಿಂದ, ಸರ್ಕಾರ ಕೂಡಲೇ ಇವರ ನೆರವಿಗೆ ಬರದೇ ಹೋದರೆ 13 ಒಕ್ಕೂಟಗಳು ಬಾಗಿಲು ಮುಚ್ಚಿ ಸುಮಾರು 50 ಲಕ್ಷ ರೈತ ಕುಟುಂಬಗಳು ಮತ್ತೆ ಬೀದಿಗೆ ಇಳಿಯಬೇಕಾದಂಥ ಸನ್ನಿವೇಶ ಬರುತ್ತದೆ. ಆದ್ದರಿಂದ, 3 ಸಾವಿರ ಟನ್ ಬೆಣ್ಣೆ, 18 ಸಾವಿರ ಟನ್ ಹಾಲಿನ ಪುಡಿ ಎಲ್ಲವೂ ಸೇರಿ 425 ಕೋಟಿ ರೂಪಾಯಿಗಳ ಪದಾರ್ಥ ಇವತ್ತು stock ಬಿದ್ದಿದೆ. ಒಂದು ದಿನಕ್ಕೆ 72 ಲಕ್ಷ ಲೀಟರ್ ಹಾಲಿಗೆ 15 ಕೋಟಿ ರೂಪಾಯಿಗಳ payment ಕೊಡಬೇಕಾಗುತ್ತದೆ.

ಸಹಕಾರಿ ರಂಗದಲ್ಲಿ ರೈತರಿಗೆ ನೇರವಾಗಿ ಈ 15 ಕೋಟಿ ರೂಪಾಯಿ ಪ್ರತಿನಿತ್ಯ ತಲುಪುತ್ತಿದೆಯೆಂದರೆ ಅದು ಹಾಲು ಉತ್ಪಾದಕರ ಸಹಕಾರ ಸಂಘದಿಂದ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು:– ಅದಕ್ಕೆ ಸರ್ಕಾರ ಈಗ ಏನು ಮಾಡಬೇಕೆಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ನಾನು ಸರ್ಕಾರಕ್ಕೆ ಮನವಿ ಮಾಡುವುದಿಷ್ಟೇ, ಕೂಡಲೇ ಹಾಲು ಒಕ್ಕೂಟಗಳಿಗೆ payment ಮಾಡುವುದಕ್ಕೆ ಬಡ್ಡಿ ರಹಿತ ಸಾಲ ಕೊಡಲಿ.

ಅಧ್ಯಕ್ಷರು:– ಯಾರಿಗೆ?

ಶ್ರೀ ಹೆಚ್.ಡಿ. ರೇವಣ್ಣ:– ಹಾಲು ಒಕ್ಕೂಟಗಳೇನಿವೆ, ಅವುಗಳಿಗೆ payment ಮಾಡುವುದಕ್ಕೆ ಬಡ್ಡಿ ರಹಿತ ಸಾಲ ಕೊಡಲಿ. ಅದು ಒಂದು. ಎರಡನೆಯದಾಗಿ, SMP powder ಏನಿದೆ, last year 2012–13 ರಲಿ ಇದೇ ರೀತಿ ತೊಂದರೆಗೆ ಸಿಕ್ಕಿದಾಗ ಸರ್ಕಾರ ಸಬ್ಸಿಡಿ ಕೊಟ್ಟಿತ್ತು. ಅಂದರೆ 230/– ರೂ. ಇದ್ದರೆ 120/– ರೂ. ಅವರಿಗೆ ಬರುತ್ತಿತ್ತು. ಇನ್ನು 110/– ರೂ. ಗಳನ್ನು ಸರ್ಕಾರದಿಂದ ಸಹಾಯ ಧನ ಕೊಡಬೇಕಾಗುತ್ತದೆ. ಅದು ಸುಮಾರು 250–300 ಕೋಟಿ ರೂ. ಆಗುತ್ತದೆ. ಅದಕ್ಕೆ ನೆರವಿಗೆ ಬರಬೇಕು. ಒಂದು ಕಡೆ ಆ powder ಬೆಲೆ ಏನಿದೆ, ಅಷ್ಟನ್ನೇ ಕೊಡಲಿ, ನಾವೇನೂ ಲಾಭ ಕೊಡಿ ಎಂದಲ್ಲ. ಇನ್ನೊಂದು ಕಡೆ ಉತ್ಪಾದಕರ ಸಂಘಗಳಿಗೆ without interest payment ಅನ್ನು ಕೊಡಲಿ. ಏಕೆಂದರೆ ಹಿಂದೆ 2012–13 ನೇ ಸಾಲಿನಲ್ಲಿ ಕೊಟ್ಟಿರುವ ಉದಾಹರಣೆಗಳಿವೆ. ಆದುದರಿಂದ ಸರ್ಕಾರ ಕೂಡಲೇ ಆ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಒಕ್ಕೂಟಗಳು ಬಾಗಿಲು ಮುಚ್ಚುವ ಪರಿಸ್ಥಿತಿ ಬರುತ್ತದೆ. ಇನ್ನೊಂದು ನಮ್ಮಲ್ಲಿ ಏನಾಗಿದೆ ಎಂದರೆ ಕಳೆದ 7 ವರ್ಷದಿಂದ 2006 ರಿಂದ ಇಲ್ಲಿಯವರೆಗೆ ಹಾಲು ಪರಿವರ್ತನೆ ಮಾಡುವಂತಹ ಘಟಕಗಳನ್ನು ಮಾಡಲಾಗಿಲ್ಲ. ಮೊನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳು ಮೈಸೂರು ಮತ್ತು ಚಾಮರಾಜನಗರದಲ್ಲಿ ಒಂದು ಅಡಿಗಲ್ಲು ಹಾಕಿದ್ದಾರೆ. ಕಳೆದ 7–8 ವರ್ಷಗಳಲ್ಲಿ ಯಾವುದ್ನೂ ಮಾಡದೇ

ಇರುವುದರಿಂದ ಇಂದು ನಾವು ಮಹಾರಾಷ್ಟ್ರಕೆ, ಆಂಧ್ರಪ್ರದೇಶಕ್ಕೆ ಅಥವಾ ತಮಿಳುನಾಡಿಗೆ ಹೋಗಬೇಕಾಗುತ್ತದೆ. ಒಂದು ಲೀಟರ್ ಹಾಲನ್ನು conversion ಗೆ ಕಳುಹಿಸಬೇಕಾದರೆ 8/- ರೂ. ಕೇವಲ transportation ಬೀಳುತ್ತದೆ. ಆದುದರಿಂದ ಕೂಡಲೇ ಸರ್ಕಾರ ಆ ದಿಕ್ಕಿನಲ್ಲಿ ಈ ರಾಜ್ಯದಲ್ಲಿ ಎಲ್ಲೆಲ್ಲಿ ಹೆಚ್ಚಿಗೆ ಉತ್ಪಾದನೆಯಾಗುತ್ತದೆ, ಉದಾಹರಣೆಗೆ ಬೆಂಗಳೂರು ಇರಬಹುದು. ಬೆಂಗಳೂರಿನಲ್ಲಿ 4-5 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತದೆ. ಅದಕ್ಕೆ ಇಲ್ಲಿಯೇ ಒಂದು ಪರಿವರ್ತನಾ ಘಟಕವನ್ನು ಮಾಡಬೇಕು. ಅದೇ ರೀತಿ ಕೋಲಾರ ಇರಬಹುದು, ಮಂಡ್ಯದಲ್ಲಿರಬಹುದು. ಇದನ್ನು ಮಾಡದಿದ್ದರೆ ಮುಂದಿನ ದಿನಗಳಲ್ಲಿ ರೈತರು ತೊಂದರೆಗೀಡಾಗುತ್ತಾರೆ. ಏಕೆಂದರೆ ನೇರವಾಗಿ ರೈತರಿಗೆ ಅನುಕೂಲ ಆಗಬೇಕು.

ಅಧ್ಯಕ್ಷರು:- ಈಗ ಅವರು ಒಂದು ಹೇಳಿಕೆಯನ್ನು ಇಲ್ಲಿ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ:- Sir ಹೇಳಿಕೆ ಕೊಟ್ಟಿದ್ದಾರೆ. ಅದು discussion ಇದ್ದರೆ ಅವರು ಹೇಳಬಹುದಾಗಿತ್ತು. ಏಕೆಂದರೆ, ನಾನು ಮಂತ್ರಿಗಳು ಬರಬೇಕು, ಮುಖ್ಯಮಂತ್ರಿಗಳು ಇರಬೇಕು. ಏಕೆಂದರೆ, ಇದು 50 ಲಕ್ಷ ರೈತ ಕುಟುಂಬಗಳ ಪ್ರಶ್ನೆ ಮಹದೇವಪ್ರಸಾದ್ ರವರೇ. ಚರ್ಚೆ ಮಾಡುವ ಸಂದರ್ಭದಲ್ಲಿ ನಾನು ಹಾಜರಿರುತ್ತೇನೆಂದು ಮುಖ್ಯಮಂತ್ರಿಗಳೂ ಹೇಳಿದ್ದಾರೆ, ಮಂತ್ರಿಗಳೂ ಹೇಳಿದ್ದಾರೆ.

ಅಧ್ಯಕ್ಷರು:- ಮತ್ತೆ ರಾಜ್ಯಪಾಲರು ಬೇಡವೇನು?

ಶ್ರೀ ಹೆಚ್.ಡಿ. ರೇವಣ್ಣ:- ಅವರಿದ್ದರೆ ಒಳ್ಳೆಯದು. ನನ್ನದೇನೂ ಇಲ್ಲ. ಬೇಡವೆಂದರೆ ನನ್ನದೇನೂ ಇಲ್ಲ, ನೀವು ಒಂದು ಕೆಲಸ ಮಾಡಿ ಸರ್.

ಅಧ್ಯಕ್ಷರು:- ಹಾಗಲ್ಲ. ಏ ರೇವಣ್ಣ, ನಿಮ್ಮ ಗಮನಕ್ಕೆ. . .

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರ, ಪರೋಕ್ಷವಾಗಿ ನನ್ನ ಇಲಾಖೆಯ ವ್ಯಾಪ್ತಿಯಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವುದರಿಂದ ಈ ಸೊಸೈಟಿಗಳು, ಕೆ.ಎಂ.ಎಫ್. ಇವೆಲ್ಲಾ

ಸಹಕಾರಿ ಕಾಯಿದೆಯಡಿಯಲ್ಲಿ ರಚನೆಯಾಗಿರುವ ಸಂಸ್ಥೆಗಳಾಗಿರುವುದರಿಂದ ನಮ್ಮ ಇಲಾಖೆಯೂ ಕೂಡಾ ಪರೋಕ್ಷವಾಗಿ ಅದರಲ್ಲಿ ಭಾಗಿಯಾಗಿದೆ. ಆದುದರಿಂದ ಅವರೇನು ಹೇಳುತ್ತಾರೆ, ಆ ವಿಚಾರದಲ್ಲಿ ನನ್ನ ಅಭಿಪ್ರಾಯದಲ್ಲಿರುವುದು ಮತ್ತು ಮಂತ್ರಿಗಳು ಹೇಳಿರುವ ವಿಚಾರ ಎರಡನ್ನೂ ಕ್ರೋಢೀಕರಿಸಿ ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು:– ಇದೆಯಲ್ಲ ನಿಮ್ಮ ಬಳಿ. ಹೇಳಿ ಮತ್ತೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಗಳು ಹೇಳಿದರು. ಇದು ಸಹಕಾರಿ ಇಲಾಖೆಯಿಂದ ಎಂದು.

ಅಧ್ಯಕ್ಷರು:– ಏನ್ರಿ? ರೇವಣ್ಣ ತಡೆಯಿರಿ. ಏನೋ ಗಡಿಬಿಡಿಯಾಗಿದೆ.

ಶ್ರೀ ಎಂ.ಪಿ. ರವೀಂದ್ರ:– ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ನನ್ನದೊಂದು ಸಲಹೆ.

ಅಧ್ಯಕ್ಷರು:– ಏನಂತ?

ಶ್ರೀ ಎಂ.ಪಿ. ರವೀಂದ್ರ:– ಶಾಲಾ ಮಕ್ಕಳಿಗೆ ಮೂರು ದಿನ powder ಹಾಲನ್ನು ಕೊಡುವ ಕಾರ್ಯಕ್ರಮ ಏನಿದೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಲೋಚನೆ ಮಾಡಿ 5 ದಿನಕ್ಕೆ extend ಮಾಡಿದರೆ ನಮ್ಮ ಒಕ್ಕೂಟಗಳಿಗೆ ನಷ್ಟವಾಗುವುದು ಕೂಡಾ ಸ್ವಲ್ಪ ಕಡಿಮೆಯಾಗುತ್ತದೆ.

ಅಧ್ಯಕ್ಷರು:– ಕೊಡುತ್ತಿದ್ದಾರಲ್ಲ?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, . .

ಶ್ರೀ ಎಂ.ಪಿ. ರವೀಂದ್ರ:– ಮೂರು ದಿನ ಕೊಡುವ ಯೋಜನೆಯನ್ನು 5 ದಿನ powder ಹಾಲನ್ನು ಕೊಡುವಂತೆ 2 ದಿನಗಳು extend ಮಾಡಿದರೆ ನಮ್ಮ ಒಕ್ಕೂಟಗಳಿಗೂ ಸಹಾಯವಾಗುತ್ತದೆ.

ಅಧ್ಯಕ್ಷರು:– ನಿಮ್ಮದೂ ಒಕ್ಕೂಟ ಇದೆಯೆ?

ಶ್ರೀ ಎಂ.ಪಿ. ರವೀಂದ್ರ:- ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಒಕ್ಕೂಟದಲ್ಲಿದ್ದೇನೆ.

ಅಧ್ಯಕ್ಷರು:- ಹೌದೇನು? ನೀವು ಆ ಕ್ಷೇತ್ರಕ್ಕೆ ಹೇಗೆ ಧುಮುಕಿದಿರಿ?

ಶ್ರೀ ಎಂ.ಪಿ. ರವೀಂದ್ರ:- ನಾನು ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ನಾಲ್ಕನೇ ಬಾರಿ ಅಧ್ಯಕ್ಷನಾಗಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರೆ, ಅವರು ಬಳ್ಳಾರಿ ಜಿಲ್ಲಾ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರೂ ಆಗಿದ್ದಾರೆ ಮತ್ತು ಬಳ್ಳಾರಿ, ಕೊಪ್ಪಳ, ರಾಯಚೂರು ಮೂರು ಸೇರಿರುವ ಒಕ್ಕೂಟದಿಂದ ಕೆ.ಎಂ.ಎಫ್. ಅನ್ನು ಪ್ರತಿನಿಧಿಸುತ್ತಿದ್ದಾರೆ. ಅವರು ಖಾಯಂ ಆಗಿ ಬಹಳ ವರ್ಷದಿಂದ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಮತ್ತು ಕೆ.ಎಂ.ಎಫ್. ನ ಪೂರ್ಣ ನಿಯಂತ್ರಣದಲ್ಲಿದೆ.

ಶ್ರೀ ಎಂ.ಪಿ. ರವೀಂದ್ರ:- ಮಾನ್ಯ ಅಧ್ಯಕ್ಷರೆ, ರೇವಣ್ಣನವರು ನಮ್ಮ ಮಾರ್ಗದರ್ಶಕರು.

ಅಧ್ಯಕ್ಷರು:- ರೇವಣ್ಣ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾನು ಇರುವವರೆಗೆ ಮಾಡಿದ್ದೇನೆ. ಕಳೆದ 7 ವರ್ಷಗಳಿಂದ ಮಾಡಲಾಗಿಲ್ಲ. ಅದನ್ನು ಮಾಡಿ ಎಂದು ಹೇಳುತ್ತಿದ್ದೇನೆ. ಸದನಕ್ಕೆ ಮಾನ್ಯ ಪಶು ಸಂಗೋಪನಾ ಮಂತ್ರಿಗಳೇ ಬಂದರು. ದುಡ್ಡು ಕೊಡುವವರು ಅವರ ಇಲಾಖೆಯಿಂದ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ರೇವಣ್ಣನವರ ಪ್ರಭಾವ ಹೇಗಿದೆ ಎಂದರೆ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಹದೇವಪ್ರಸಾದ್ ರವರು ದುಡ್ಡು ಕೊಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ ಪಶು ಸಂಗೋಪನಾ ಇಲಾಖೆಯಿಂದಲೇ ನಮ್ಮ ಕಾನೂನು ಮಂತ್ರಿಗಳು ರೈತರ ನೆರವಿಗೆ ಬರಬೇಕಾಗುತ್ತದೆ ಎಂದು ಕೇಳುತ್ತಿದ್ದೇನೆ. ರವಿಯವರು ಹೇಳಿದರು,

ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯಲ್ಲಿ 5 ದಿನ ಕೊಡುವ ಹಾಗೆ ಮಾಡಿದ್ದಾರೆ. ಅದರಿಂದ ಒಂದು ದಿನಕ್ಕೆ 8 ಲಕ್ಷ ಲೀಟರ್ ಹಾಲನ್ನು ಮಾತ್ರ ಕೊಡುತ್ತಿದ್ದಾರೆ. ಇನ್ನು ಎರಡು ದಿನಕ್ಕೆ ಮತ್ತೆ extra ಮಾಡಿದರೆ ಇನ್ನೊಂದು 2 ಲಕ್ಷ ಲೀಟರ್ ಕೊಡಬಹುದು. ಒಟ್ಟು 10 ಲಕ್ಷ ಲೀಟರ್ ಆಗುತ್ತದೆ. ಇನ್ನು 24 ಲಕ್ಷ ಈಟರ್ ಹಾಲು conversion ಗೆ ಹೋಗಿಯೇ ಹೋಗುತ್ತದೆ.

ಅಧ್ಯಕ್ಷರು:– ಏನು ಮಾಡಬೇಕೆಂದು ಹೇಳಿ?

ಶ್ರೀ ಹೆಚ್.ಡಿ. ರೇವಣ್ಣ:– ಅದಕ್ಕಾಗಿ ನಾನು ಹೇಳುವುದೇನೆಂದರೆ, 2012–13 ನೇ ಸಾಲಿನಲ್ಲಿ without interest ಒಕ್ಕೂಟಗಳಿಗೆ ರೈತರಿಗೆ payment ಕೊಡುವುದಕ್ಕೆ ಸಕಾರ ಹಣ ಕೊಡಬೇಕು ಅಥವಾ ಕಳೆದ ಬಾರಿಯಂತೆ ಬ್ಯಾಂಕಿನವರಿಗೆ ಕೊಟ್ಟು ಬಡ್ಡಿಯನ್ನು ಸರ್ಕಾರದಿಂದ ಕೊಟ್ಟಿರುವುದು ಒಂದು ಮಾರ್ಗ. ಎರಡನೆಯದು, ಸುಮಾರು ಇವತ್ತು 230 ಮೆಟ್ರಿಕ್ ಟನ್ ಪ್ರತಿನಿತ್ಯ ಹೋಗುತ್ತಿದ್ದು, 18 ಸಾವಿರ ಟನ್ powder stock ಇದೆ. ಒಂದು ಪೌಡರಿಗೆ 120/– ರೂ. ಮಾರುಕಟ್ಟೆ ದರ ಇದೆ. 230/– ರೂ. ಬೀಳುತ್ತದೆ. ಏನು 130/– ರೂ. ಕಡಿಮೆಯಾಗುತ್ತದೆ ಅದನ್ನು ಸರ್ಕಾರ ಸಹಾಯಧನದ ರೂಪದಲ್ಲಿ ಕೊಡಬೇಕು ಎಂದು ಎರಡು ಬೇಡಿಕೆ ಇದೆ. ಇವೆರಡನ್ನೂ ಮಾಡದಿದ್ದರೆ ಹಾಲಿನ ಡೈರಿಗಳು ಬಾಗಿಲು ಮುಚ್ಚುತ್ತಾರೆ. 50 ಲಕ್ಷ ಕಟುಂಬಗಳು ನಷ್ಟಕ್ಕೆ ಸಿಲುಕುತ್ತವೆ. ಅದನು ಪಶು ಸಂಗೋಪನಾ ಸಚಿವರು ಉತ್ತರ ಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು:– ಮಂತ್ರಿಗಳೇ ಹೇಳಿ. ಎರಡೇ issue.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಇದಲ್ಲದೆ 19/– ರೂ. rate ಇಳಿಸಿದರು. ಕಳೆದ ಆರು ತಿಂಗಳಿನಿಂದ ಇಲ್ಲಿಗೆ 5/– ರೂ. rate ಇಳಿಸಿದ್ದಾರೆ. ಅದನ್ನು ಕೂಡಾ ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ:– [illegible] 25/– ರೂ. ಕೊಡುತ್ತಿದ್ದರು.

ಶ್ರೀ ಟಿ.ಬಿ. ಜಯಚಂದ್ರ (ಪಶುಸಂಗೋನಾ ಸಚಿವರು):– ಮಾನ್ಯ ಅಧ್ಯಕ್ಷರೆ, ಅದನ್ನು ಕಡಿಮೆ ಮಾಡಿರುವವರು Union ನವರು.

ಶ್ರೀ ಹೆಚ್.ಡಿ. ರೇವಣ್ಣ:- ಪ್ರತಿ ತಿಂಗಳೂ ನಷ್ಟವಾದರೆ ಏನು ಮಾಡುತ್ತಾರೆ? ಕಡಿಮೆ ಮಾಡಲೇಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಆ ದರವನ್ನು Union ನವರು ಕಡಿಮೆ ಮಾಡಿರುವುದು. ನಾವು ಸರ್ಕಾರದಿಂದ ಕೊಡುವ ಪ್ರೋತ್ಸಾಹ ಧನದಲ್ಲಿ ಯಾವುದ್ನೂ ಕಡಿತ ಮಾಡಿಲ್ಲ. ಹಣವನ್ನು ಕಾಲಕಾಲಕ್ಕೆ ಸರಿಯಾಗಿ ಕೊಡುತ್ತಿದ್ದೇವೆ. ಆದರೆ, Union ನಲ್ಲಿ ಆಗಿರುವುದು ಎಂದರೆ, ನಾವು ಸರ್ಕಾರ ಕೊಟ್ಟಂತ ಪ್ರೋತ್ಸಾಹಧನ ಇರಬಹುದು, ಯಾವುದೇ ಇರಬಹುದು. ಕಳೆದ ಎರಡು ವರ್ಷದ ಹಿಂದೆ 42 ಲಕ್ಷ ಲೀಟರ್ ಇದ್ದದ್ದು, ಇವತ್ತು 74 ಲಕ್ಷ ಲೀಟರ್ ಆಗಿದೆ. Milk Holiday ಯನ್ನು declare ಮಾಡುವಂತಹ ಅನಿವಾರ್ಯ ಪರಿಸ್ಥಿತಿಗೆ ನಾವು reach ಆಗಿದ್ದೇವೆ. ಆದರೆ Milk Holiday declare ಮಾಡಿದರೆ ರೈತರಿಗೆ ಕಷ್ಟವಾಗುತ್ತದೆ ಎನ್ನುವ ಕಾರಣಕ್ಕಾಗಿ ನಾವು ಏನೆಲ್ಲಾ ಪ್ರಯತ್ನ ಮಾಡಿ ಅದನ್ನು ಎಲ್ಲಿಯವರೆಗೆ ಎಂದರೆ ಭಾರಾಮತಿಯವರೆಗೆ ಕಳುಹಿಸಿ 1700 ಕಿ.ಮೀ. ವರೆಗೆ ಕಳುಹಿಸಿ ನಾವು powder ಮಾಡುತ್ತಿದ್ದೇವೆ. ನಿಜ, ಇವತ್ತು ರೇವಣ್ಣನವರು ಹೇಳಿರುವುದು, ಅವರು ಮಾತನಾಡುವಾಗ ನಾನು ಇರಲಿಲ್ಲ. ವಾಸ್ತವಿಕವಾದ ಸಂಗತಿಯನ್ನೇ ಅವರು ಹೇಳಿರುತ್ತಾರೆ.

ಅಧ್ಯಕ್ಷರು:- ಅಲ್ಲಲ್ಲ, ಕೊನೆಯಲ್ಲಿ ಅವರು ಹೇಳಿದರು ನೋಡಿ. ಬಡ್ಡಿ ರಹಿತ ಸಾಲ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾವು 3 ರಿಂದ 5 ದಿವಸದವರೆಗೆ extend ಮಾಡುವುದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಎರಡನೆಯದು, infrastructure, ಈಗಲೂ ಕೂಡಾ ನಾನು ಬಳ್ಳಾರಿ, ಬೆಳಗಾವಿ ಮತ್ತು ತುಮಕೂರಿನ ಡೈರಿಯವರ ಸಮಸ್ಯೆಗಳ ಕುರಿತು ಸಭೆ ಕರೆದು ಚರ್ಚಿಸಿದ್ದೇನೆ. ಅಲ್ಲಿಗೆ ಬೇಕಾದ ಮೂಲಭೂತ ಸೌಕರ್ಯ, ಇದರ sales ಜಾಸ್ತಿ ಮಾಡುವುದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಒಂದು ಸಭೆಯನ್ನೂ ಕೂಡಾ ಕರೆದಿದ್ದೆ. ಅದಕ್ಕೆ ಸುಮಾರು ನಾವು flexi pack ಗೆ ಎಂದು ಮೂರು ಕಡೆಗೇನೆ ಸುಮಾರು 80 ಕೋಟಿ ರೂ.

ಕೊಡಬೇಕಾಗುತ್ತದೆ. ಅದು additionally ಯಾಗಿ ಕೊಡಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಹಾಗಾಗಿ ನಾನು ಇಷ್ಟು ಹೊತ್ತು ಕುಳಿತು ಅದನ್ನೇ ಚರ್ಚೆ ಮಾಡುತ್ತಿದ್ದೆ. ರೇವಣ್ಣನವರು ಹೇಳಿರುವಂತಹುದು ಇವತ್ತು Union ನವರಿಗೆ ಕೊಡುತ್ತಿರುವ ಹಣದ ವಿಚಾರ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಇದು ಉತ್ತರವೇನು? ಮತ್ತೆ ನಮ್ಮದೆಲ್ಲಾ ಸಹಿ ಹಾಕಿಸಿಕೊಂಡಿದ್ದಾರೆ, ರೇವಣ್ಣನವರು ಅವರೊಬ್ಬರೇ ಮಾತನಾಡಿ ಕುಳಿತುಕೊಂಡು ಬಿಟ್ಟರು.

ಶ್ರೀ ಟಿ.ಬಿ. ಜಯಚಂದ್ರ:- ನಿಮ್ಮೆಲ್ಲರ ಪರವಾಗಿ ಅವರೇ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಈಗ 7 ಲಕ್ಷ ಲೀಟರ್ ಹಾಲು ತಮಿಳುನಾಡು, ಆಂಧ್ರಪ್ರದೇಶದಿಂದ chemical based ಹಾಲು ಬರುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- 10 ಲಕ್ಷ ಲೀಟರ್ ಹಾಲು.

ಶ್ರೀ ಸಿ.ಟಿ. ರವಿ:- ನೀವು ಅದನ್ನು ನಿಯಂತ್ರಣ ಮಾಡಿ. 7 ಲಕ್ಷ ಲೀಟರ್‌ಗೆ ಮಾರುಕಟ್ಟೆ ನಮ್ಮ ಕರ್ನಾಟಕದ ಮಾರುಕಟ್ಟೆಯಲ್ಲಿ create ಆಗುತ್ತದೆ. Manufactured milk 7 ಲಕ್ಷ ಲೀಟರ್ ಹಾಲು ತಮಿಳುನಾಡು ಮತ್ತು ಆಂಧ್ರಪ್ರದೇಶದಿಂದ ಬರುತ್ತಿದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- 10 ಲಕ್ಷ ಲೀಟರ್ ಹಾಲು ತಮಿಳುನಾಡಿನಿಂದ ಕರ್ನಾಟಕಕ್ಕೆ ಬರುತ್ತಿದೆ. ಅವರಿಗೇಕೆ ಅನುಮತಿ ಕೊಡುತ್ತೀರಿ?

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಆದಿತ್ಯ, ಅವು ಇವು ಎಲ್ಲಾ ಅಲ್ಲಿ ಖರ್ಚಾಗುತ್ತಿದೆ. ಅವರಿಗೆ ಏಕೆ ಅನುಮತಿ ಕೊಟ್ಟಿ ನಾವು? ಹೊರರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಹಾಲು ಬರುತ್ತಿದೆಯಲ್ಲ, ಖಾಸಗಿ ಡೈರಿಗಳ ಹಾಲು ಬರುತ್ತಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಜನರ ಆರೋಗ್ಯವೂ ಹಾಳು. ನಮ್ಮ ಹಾಲು ಉತ್ಪಾದನೆ ಮಾಡುವಂತಹ ರೈತರ ಮನೆಯೂ ಹಾಳು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ನೋಡಿ ಈಗ ನಾವು ಹೊರ ರಾಜ್ಯಗಳಿಂದ ನಮ್ಮ ರಾಜ್ಯದೊಳಗೆ ಬರುವ ಹಾಲಿನ ಪ್ರಮಾಣ ಕಡಿಮೆಯಾಗಿದೆ. ಖಾಸಗಿ ಡೈರಿ ಹಾಲುಗಳು ಬರುತ್ತಿವೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ನೋಡಿ ಈಗ ನಾವು ಹೊರ ರಾಜ್ಯಗಳಿಂದ ನಮ್ಮ ರಾಜ್ಯದೊಳಗೆ ಬರುವ ಹಾಲಿನ ಪ್ರಮಾಣ ಕಡಿಮೆಯಾಗಿದೆ.

ಶ್ರೀ ವೈ.ಎಸ್.ವಿ. ದತ್ತಾ:- ಇಲ್ಲ, ಇಲ್ಲ. ಸಚಿವರೆ ದಯವಿಟ್ಟು ಹೇಳಿ ಆಶ್ಚರ್ಯವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:- ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ನಾವು ಹೇಗೆ ನಿಯಂತ್ರಣ ಮಾಡುವುದು? ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ಹಾಲು ಬೇರೆ ರಾಜ್ಯಕ್ಕೆ ಕಳುಹಿಸುತ್ತೇವೆ, ಹೊರ ರಾಜ್ಯಕ್ಕೆ ಮಾರಾಟ ಮಾಡಬಾರದೆಂದು ನಿರ್ಬಂಧ ಹೇರಲು ಆಗುತ್ತದೆಯೇ?

(ಗೊಂದಲ)

ಶ್ರೀ ಸಿ.ಟಿ. ರವಿ:– 23 ಲಕ್ಷ ಲೀಟರ್ ಹಾಲು ಬೆಂಗಳೂರಿಗೆ ಬೇಕು. ಕೆ.ಎಂ.ಎಫ್. supply ಮಾಡುತ್ತಿರುವುದು 15 ಲಕ್ಷ ಲೀಟರ್.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಕಾಶ್ಮೀರದವರೆಗೆ ನಮ್ಮ ನಂದಿನಿ ಹಾಲು ಮಾರಾಟವಾಗುತ್ತದೆ. ಶಬರಿಮಲೈ, ಕೇರಳದಲ್ಲಿ ಅತಿ ಹೆಚ್ಚು ಮಾರಾಟವಾಗುತ್ತದೆ. ಎಲ್ಲಾ ಬೇರೆ ಬೇರೆ ರಾಜ್ಯಗಳಲ್ಲಿ ನಮ್ಮ K.M.F. products ಮಾರಾಟವಾಗುತ್ತಿದೆ.

ಶ್ರೀ ಸಿ.ಟಿ. ರವಿ:– Manufactured milk ಇದೆಯಲ್ಲ, ಇದು ಆರೋಗ್ಯಕ್ಕೂ ಹಾನಿಕರ, ಇದೊಂದರಲ್ಲಿ ನೀವು control ಮಾಡಬಹುದು.

ಶ್ರೀ ಟಿ.ಬಿ. ಜಯಚಂದ್ರ:– ನೀವು ಚರ್ಚೆ ಮಾಡುವುದಾದರೆ ಚರ್ಚೆ ಮಾಡಿ ಕೊನೆಗೆ ನಾನು ಉತ್ತರ ಕೊಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಇದರಲ್ಲಿರುವ ಪ್ರಶ್ನೆ ಏನು ಗೊತ್ತೆ, ಉತ್ತರ ಎಲ್ಲಾ ಓದಿದ್ದೇವೆ, ಈಗ ನೀವು ಹೇಳುವ ತೊಂದರೆಗಳೆಲ್ಲಾ ನಮಗೆ ಅರ್ಥವಾಗಿವೆ. ಈಗ ಹಾಲಿನ ಪುಡಿಗೆ ಬೇಡಿಕೆ ಇಲ್ಲ ಬರೀ ಬೆಣ್ಣೆ ತುಪ್ಪ, ಹಾಲಿನ ಪುಡಿ ಸ್ಟಾಕ್ ಉಳಿದುಕೊಂಡಿದೆ, ಈಗ ಏನು ಮಾಡುವುದು? ಹಾಲು 72 ಲಕ್ಷ ಲೀಟರ್ ಬರುತ್ತದೆ, ಕೊಂಡುಕೊಳ್ಳುವುದಿಲ್ಲವೆಂದರೆ ರೈತರಿಗೆ ತೊಂದರೆಯಾಗುತ್ತದೆ. ಹಾಗೂಹೀಗೂ ರೈತರಗೆ ರಜೆ ಕೊಡದೆ ನಾವು ಕೊಂಡುಕೊಳ್ಳುತ್ತಿದ್ದೇವೆ, ಎಲ್ಲಾ ನೋಡಿದ್ದೇವೆ. ಒಟ್ಟಾರೆ ಸರ್ಕಾರ ಒಂದು ಲೆಕ್ಕಾಚಾರ ಮಾಡಬೇಕು, ಈಗ ನಾಲ್ಕು ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ, ಆ ರೈತರಿಗೆ ತೊಂದರೆಯಾಗಬಾರದು.

ಶ್ರೀ ಸಿ.ಟಿ. ರವಿ:– ಕೆಲವು ಕಡೆ ನಾಲ್ಕು ರೂಪಾಯಿ, ಕೆಲವು ಕಡೆ 6 ರೂಪಾಯಿ, ₹ 25 ಕೊಡುವ ಕಡೆ, ₹ 19 ಕೊಡುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿರುವುದೇನಂದರ, ಹಾಲನ ಡ್ಯಂಗ ಹಚ್ಚಗ ಜನರು ವಲಸ ಹೋಗಿರಲಿಲ್ಲ. ಮೊದಲು ಸರ್ಕಾರ ಪ್ರೋತ್ಸಾಹಧನ ಕೊಟ್ಟ ಮೇಲೆ, ಬೆಂಗಳೂರಿನಲ್ಲಿ ಗಾರ್ಮೆಂಟ್ಸ್‌ನಲ್ಲಿದ್ದವರೆಲ್ಲಾ ಬಂದು ಹಾಲಿನ ಡ್ಯೆರಿ

ಮಾಡಿಕೊಂಡರು, ತಿಳಿದುಕೊಳ್ಳಿ, ರೇಟ್ ಕೊಟ್ಟರಿ, ರೇಟ್ ಕೊಟ್ಟಾಗ ಜನರು ಆ ಉದ್ಯಮಕ್ಕೆ ನುಗ್ಗಿದರು. ಇವತ್ತು ಈ ರಾಜ್ಯದಲ್ಲಿ ಹಾಲು ಹೆಚ್ಚಿಗೆ ಉತ್ಪತ್ತಿಯಾಗುತ್ತಿದೆ. ನಮ್ಮ ಕಡೆ 70% ಜನ ಅದರಿಂದಲೇ ಜೀವನ ಸಾಗಿಸುವ ಪರಿಸ್ಥಿತಿ ಇದೆ. ಏನಾದರೂ ಸರ್ಕಾರ ಸ್ವಲ್ಪ ತಾಳ್ಮೆ ಇಲ್ಲದೆ, ತಪ್ಪು ಹೆಜ್ಜೆ ಇಟ್ಟಿದ್ದೇ ಆದರೆ, ಏನು ಸರಣಿ ಆತ್ಯಹತ್ಯೆ ನೋಡುತ್ತಿದ್ದೀರಿ, ಅದನ್ನು ಆ ಕ್ಷೇತ್ರದಲ್ಲಿ ನೋಡಬೇಕಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು):– ಪರಿಹಾರಕ್ಕೆ ಆ ಪದವನ್ನು ಬಳಸುವುದನ್ನು ನಾವು ಆದಷ್ಟು ಕಡಿಮೆ ಮಾಡಬೇಕು, ಅವು ತಾನಾಗಿಯೇ ಕಡಿಮೆಯಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಹಾಗೆ ಆಗುತ್ತಿದೆ, ಆಯಿತು ಅದನ್ನು ಬಿಟ್ಟು ಬಿಡಿ, ಇವು ನಿಜವಾದ ಆತ್ಮಹತ್ಯೆಯಾಗುತ್ತದೆ ಎಂದು ಹೇಳಿದ್ದು.

(ಗೊಂದಲ)

ಡಾ|| ಸಿ.ಎನ್. ಅಶ್ವತ್ಥನಾರಾಯಣ:– ಸರ್, ಅದು seriousness ಗೋಸ್ಕರ, ಏನಾಗಬಹುದು ಪರಿಣಾಮ ಎನ್ನುವುದಕ್ಕೆ ಹೇಳುತ್ತಿರುವುದು.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– Seriousness ಗೋಸ್ಕರ ಎಲ್ಲದಕ್ಕೂ ಆ ಪದವನ್ನು ಬಳಕೆ ಮಾಡುವುದೇ? ಅದು ತಪ್ಪು.

ಡಾ|| ಸಿ.ಎನ್. ಅಶ್ವತ್ಥನಾರಾಯಣ:– ಈ ಸದನದಲ್ಲಾದರೂ ಮಾತನಾಡಬೇಕಲ್ಲ, ಅದು ತಪ್ಪು ಹೇಗಾಗುತ್ತದೆ? ನೀವು ಚೆನ್ನಾಗಿದ್ದೀರಿ, ಬೇರೆಯವರ ಕಷ್ಟ ಹೇಗೆ ಗೊತ್ತಾಗಬೇಕು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಅವರು ಹೇಳುತ್ತಿರುವುದು ಕರೆಕ್ಟ್ ಇದೆ. ಆತ್ಮಹತ್ಯೆ ಎನ್ನುವ ಪದವನ್ನು ಈ ಮಾಧ್ಯಮಗಳಲ್ಲಿ ನಾವು ಮಾತನಾಡಿ ಮಾತನಾಡಿ ಒಂದು ರೀತಿ ಜಾಸ್ತಿಯಾಗುತ್ತದೆ.

ಅಧ್ಯಕ್ಷರು:– ಮಹದೇವಪ್ರಸಾದ್‌ರವರೆ, ಅದು ಬೇಡ ಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ನಾನು ಹೇಳುತ್ತಿರುವುದು, ಮುಂದೆ ಒಂದು ದಿವಸ ಬರಬಹುದು ಎನ್ನುವುದು. ಆಮೆಲೆ ಇನ್ನೊಂದು ನಮ್ಮ ಆಂಜನೇಯ ಮತ್ತು ಜಯಚಂದ್ರರವರು ಹಾಲು ಹೆಚ್ಚಾಗುವುದಕ್ಕೆ ಕಾರಣರಿದ್ದಾರೆ. ಅವರು ಏನು ಮಾಡಿದರೆಂದರೆ, ಹರಿಜನ ಗಿರಜನರ ಹಣವೇನಿದೆ ನೀವು ಬದುಕಿ ಎಂದು ಆ ಅಮೌಂಟ್ ಎಲ್ಲವನ್ನು ಅವರು ಡೈವರ್ಟ್ ಮಾಡಿ ಹಾಲಿನ ಕಡೆಗೆ ತಿರುಗಿಸಿದರು. ಈಗ ಮಾರುಕಟ್ಟೆ ಇರುವುದು ಗ್ರಾಮೀಣ ಪ್ರದೇಶದದಲ್ಲಿ ಇದೊಂದಕ್ಕೇ ಸ್ಥಿರವಾದ ಮಾರುಕಟ್ಟೆ ಇದ್ದದ್ದು, ಇನ್ಯಾವುದಕ್ಕೂ ಮಾರುಕಟ್ಟೆ ಇರಲಿಲ್ಲ. ಇದೊಂದಕ್ಕೆ ಗುರುವಾರ ಸಂತೆಯಲ್ಲಿ ಜನರಿಗೆ ದುಡ್ಡು ಸಿಗುತ್ತಿದ್ದದ್ದು ಖಾಯಂ ಆಗಿ ಹಾಲಿನ ಉತ್ಪತ್ತಿಯಲ್ಲಿ. ಆವಾಗ ಜನರು ಏನು ಮಾಡಿದರೆಂದರೆ, ಯಾವುದನ್ನು ಮಾಡಿದರೆ ಹೆಚ್ಚಿಗೆ ಆದಾಯ ಸಿಗುತ್ತದೆ, ಗ್ಯಾರೆಂಟಿ ಬೆಲೆ ಸಿಗುತ್ತದೆ, ಗ್ಯಾರೆಂಟಿ ಹಣ ಸಿಗುತ್ತದೆ, ಈ ಕಡೆ ಜನ ನುಗ್ಗಿದರು. ಅದರ ಜೊತೆಗೆ ನಿಮ್ಮ ಖಾಸಗಿಯವರೇನು ಕಡಿಮೆ competition ಮಾಡಲಿಲ್ಲ. ಖಾಸಗಿ ಡೈರಿಗಳು, ಕೆಎಂಎಫ್ ಏನು ಹಾಲನ್ನು ತೆಗೆದುಕೊಳ್ಳುತ್ತಿತ್ತು, ಅಷ್ಟೇ ಹಾಲನ್ನು ಊರಿನಲ್ಲಿ ಖರೀದಿ ಮಾಡುವ ಮಟ್ಟಕ್ಕೆ ಬಂದರು, ಅಷ್ಟೇ ಹಣವನ್ನು ಕೊಡು ಹಂತಕ್ಕೆ ಅವರು ಬಂದರು. ಅವರು 4–5 ಕೆಎಂಎಫ್ ಗೆ ಸಮಾನವಾಗಿ ಹಾಲನ್ನು ಖರೀದಿ ಮಾಡಲು ಪ್ರಾರಂಭಿಸಿದರು. ಆಮೇಲೆ ಅದೆಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಪ್ರದೇಶದಲ್ಲಿ ಬೆಳೆ ಬೆಳೆದರೆ ನಿಮ್ಮ ವಿದ್ಯುತ್ ಕೊಡುವುದು ಒಂದು ಗಂಟೆ ಮಾತ್ರ ಕೊಡುವುದು. ಅದೂ ನಿಮ್ಮ ವಿದ್ಯುತ್‌ನಿಂದ ಪೈರು ಬೆಳೆಯುವುದಕ್ಕೆ ಮಾತ್ರ ಸಾದ್ಯ. ಆಮೇಲೆ water sources ಇವೆಲ್ಲವೂ ಡೈರಿಗೆ ಸೀಮಿತವಾಯಿತು. ನೀವು ಈ ಮಹಿಳಾ ಸಂಘಗಳಿಗೆ ಸಾಲ ಕೊಟ್ಟಿರಿ, ಸೌಲಭ್ಯ ಕೊಟ್ಟಿರಿ, ಅವರು ಯಾವುದಕ್ಕೆ ಬಂಡವಾಳ ಹೂಡಬೇಕು? ಎಲ್ಲಾ ಮಹಿಳಾ ಸಂಘಗಳು ಬಂಡವಾಳ ಹೂಡಿದ್ದೆ ಕೆಎಂಎಫ್ ಗೆ, ಹಸುಗಳನ್ನು ಖರೀದಿ ಮಾಡುವುದು. ಆಮೇಲೆ ಹಸುಗಳು ಹೇಗೆ ಸಿಕ್ಕಿತು ಎಂದರೆ, ಅದ್ಯಾವ ಪುಣ್ಯಾತ್ಮ ತಯಾರು ಮಾಡದ್ದನೋ, ನಮ್ಮ ಜಯಚಂದ್ರರವರು ಬಂದು ಒಂದು ಡೈರಿಗೆ ವಿಸಿಟ್ ಮಾಡಿ ಬಂದಿದ್ದಾರೆ, ಅಲ್ಲಿ ಹೋದರೆ ಹೊಳೆಯಲ್ಲಿ ಹೋದಂತೆ ಹಾಲು ಹೋಗುತ್ತಿರುತ್ತದೆ. ಆ ಮಟ್ಟಿಗೆ ಹಾಲು

ಕರೆಯುತ್ತಾರೆ. ಆಮೇಲೆ ನಿಮ್ಮ ಹಳ್ಳಿಯ ಜೋಳಕ್ಕೆ ಮಾರುಕಟ್ಟೆಯಲ್ಲಿ ರೇಟ್ ಸಿಗಲಿಲ್ಲ, ಇಲ್ಲಿ ಕತ್ತರಿಸಿ ಹಸುವಿಗೆ ಹಾಕಿದರೆ, 32 ಲೀಟರ್ ಹಾಲು ಕೊಟ್ಟರೆ ಈ ದುಡ್ಡಿನಲ್ಲಿ ನಾವು ಜೀವನ ಮಾಡಬಹುದು, ಇದು ನಮಗೆ ಸರಿ. ಜೋಳವನ್ನು ತೆಗೆದುಕೊಂಡು ಹೋಗಿ ಸಂತೆನಲ್ಲಿ ಮಾರಾಟ ಮಾಡುವುದೇ ಬೇಡವೆಂದು ಆ ಜೋಳವನ್ನು ಅಲ್ಲೇ ಕತ್ತರಿಸಿ ಹಾಕಿ, ಹಾಲನ್ನು ಕರೆಯಲು ಪ್ರಾರಂಭಿಸಿದರು. ಆಮೇಲೆ ನಿಮ್ಮ ₹ 4 ರಿಂದ Hero Honda Bike ತೆಗೆದುಕೊಂಡರು. ಈಗ ಏನಾಯಿತು ಗೊತ್ತಾ, ಇವತ್ತು ನನಗೆ 10 ಫೋನ್, ನಿಮ್ಮ ₹ 4 ಕೊಟ್ಟು 4 ತಿಂಗಳಾಗಿದೆ, ಏನಾಯಿತು ದುಡ್ಡು? ಇದನ್ನು ಇವತ್ತು ವಿಧಾನಸಭೆಯಲ್ಲಿ ಪ್ರಶ್ನೆ ಮಾಡಬೇಕೆಂದು ಹೇಳಿದರು. ನೀವು 4 ತಿಂಗಳಿನಿಂದ ಪ್ರೋತ್ಸಾಹಧನ ದುಡ್ಡನ್ನು ಕೊಟ್ಟಿರಲಿಲ್ಲ. ಅದರ ಜೊತೆಗೆ ನೀವು ಇವತ್ತು ₹ 19 ಕ್ಕೆ ಇಳಿಸಿದ್ದೀರಿ. ಮಹಿಳೆಯರೆಲ್ಲಾ ಬೀದಿಗೆ ಬಂದಿರಲಿಲ್ಲ, ಮಹಿಳೆಯರೆಲ್ಲಾ ಬೀದಿಗೆ ಬರುವ ಕಾಲ ಬಂದಿದೆ. ಸ್ತ್ರೀ ಶಕ್ತಿ ಸಂಘದವರೆಲ್ಲಾ ಬ್ಯಾಂಕಿನಲ್ಲಿ ಸಾಲ ತೆಗೆದು ಅವರೆಲ್ಲಾ ಡೈರಿ ಕಟ್ಟಿಕೊಂಡು, ಹಸು ಕಟ್ಟಿಕೊಂಡು ಮನೆ ಮುಂದೆ ಹಾಲು ಹಾಕಿಕೊಂಡು ಬಹಳ ಸಂತೋಷದಿಂದ ಇದ್ದರು, ಇವತ್ತು ಅವರಿಗೆ ಕಷ್ಟಕಾಲ ಬಂದಿದೆ. ಇದನ್ನು ಸರ್ಕಾರ ಹೇಗೆ ನಿಭಾಯಿಸುತ್ತೀರೋ ಗೊತ್ತಿಲ್ಲ? ಇದನ್ನು ಅತಿ ಜಾಗ್ರತೆಯಿಂದ ವಿಶೇಷವಾಗಿ ತೆಗೆದುಕೊಂಡು ನೀವು ಹೈನುಗಾರಿಕೆಯನ್ನು ಜೋಪಾನವಾಗಿ ಕಾಪಾಡದೇ ಹೋದರೆ, ರೈತರನ್ನು, ಮಹಿಳೆಯರನ್ನು, ಸ್ತ್ರೀ ಶಕ್ತಿ ಸಂಘದವರನ್ನು ಮತ್ತು SC/ST ವರ್ಗದ ಜನ ಅವರು ದುಡಿಯುವುದಕ್ಕೆ ಈಗ ಮುಂದೆ ಬಂದಿದ್ದಾರೆ. ಎಲ್ಲರೂ ಎರಡೆರಡು ಹಸು ಕಟ್ಟಿದ್ದಾರೆ, ನೀವೆಲ್ಲಾ ಸಾಲ ಕೊಟ್ಟಿರಿ, ಬೇರೆ ಕಡೆಯೂ ಸಾಲ ಸಿಕ್ಕಿತು, ಊಟಿನಲ್ಲಿ ಒಳ್ಳೊಳ್ಳೆ ತಳಿಯನ್ನು ತೆಗೆದುಕೊಂಡು ಬಂದು ಏನನು ಹಾಲನ್ನು ಕರೆಯುತ್ತಾರೆ, ಒಬ್ಬರ ಮನೆಯಲ್ಲಿ ಒಂದೊಂದು ಕ್ಯಾನ್ ಹಾಲು ಆಗುತ್ತದೆ. ಹಾಲನ್ನು ಇವತ್ತು ಮಾರಿಕೊಂಡು ಬಹಳ ಬಹಳ ಮಜಭೂತವಾಗಿ 5–6 ತಿಂಗಳಿನಿಂದ ಇದ್ದರು, ಮಾತನಾಡಿಸಬೇಕಾದರ ಸಂತೋಷವಾಗುತ್ತಿತ್ತು, ಅಷ್ಟು ತೃಪ್ತಿಯಿಂದ ಜನರಿದ್ದರು. ಇವತ್ತು ಗಂಡಾಂತರ ಬರುತ್ತಿದೆ, ಇದು ಬರದಂತೆ ನೋಡಿಕೊಳ್ಳುವುದಕ್ಕೆ ನಮ್ಮ ರೇವಣ್ಣನವರು ಅದರಲ್ಲಿ expert ಇದ್ದಾರೆ, ಅವರು ಎಲ್ಲಾ ರೀತಿ conversion

ಮಾಡಿ ತುಪ್ಪಕ್ಕೆ ಇಷ್ಟು, ಹಾಲಿಗೆ ಇಷ್ಟು, ಎಂದು ಸಂಜೆ ಕುಳಿತು ಬರೆಯುತ್ತಿರುತ್ತಾರೆ. ಬರೆದು ಲೆಕ್ಕಾಚಾರ ಹಾಕಿ ಬಹಳ ವರ್ಷಗಳಿಂದ ಡೈರಿನಲ್ಲಿ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ.

ಅಧ್ಯಕ್ಷರು:– ಗುಜರಾತಿನಲ್ಲಿ ಡೈರೆಕ್ಟರ್ ಆಗಿದ್ದರಲ್ಲಾ?

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಮ್ಮ ಅರಸೀಕೆರೆಯದು 2,74,000 ಲೀಟರ್ ಹಾಲನ್ನು ಶೇಖರಣೆ ಮಾಡುವ ಒಂದು ಹಾಲಿನ ಕೇಂದ್ರವನ್ನು ಕೊಟ್ಟರು.

ಶ್ರೀ ವೈ.ಎಸ್.ವಿ. ದತ್ತಾ:– ನೀವು ರೇವಣ್ಣನನ್ನು ಬಳಸಿಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಅದೇನೋ ಪೌಡರ್ ಮಾಡಿದರೆ ಲಾಸ್ ಆಗುತ್ತದೆ. ನೀವು ಕರೆದ ಹಾಲನ್ನು ಮಾರಿದರೆ ಮಾರಕ್ಕೆ ಸಾಧ್ಯವಿಲ್ಲ. By-product ಮಾಡಿ, ಯಾವ ರೀತಿ by-product ಮಾಡುತ್ತೀರೋ ಗೊತ್ತಿಲ್ಲ? ಈ ಉದ್ಯಮ ಏನಾದರೂ ಆಘಾತಕ್ಕೆ ಈಡಾದರೆ ಬಹಳ ಜನ ಬೀದಿಗೆ ಬರುತ್ತಾರೆ. ಬಹಳ ಜನ ಈ ಉದ್ಯಮವನ್ನು ನಂಬಿಕೊಂಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 70% ಜನ ಈ ಉದ್ಯಮದಲ್ಲಿದ್ದಾರೆ. ನಿರುದ್ಯೋಗಿ ಪದವೀಧರರಿಗೆ 10,000/– ರೂಪಾಯಿ ಸಂಬಳ ಯಾವುದಾದರೂ ಕೆಲಸ ಕೊಡಿಸಿ ಎಂದು ನಮ್ಮ ಹತ್ತಿರ ಬರುತ್ತಿದ್ದರು. ಈಗ 25,000/–, 10,000/– ರೂ. ಸಂಬಳ ಕೊಟ್ಟು ಅವರೇ ಆಳುಗಳನ್ನು ಇಟ್ಟುಕೊಂಡಿದ್ದಾರೆ. ಅವರೇ ಎರಡು ಜನ ಡೈರಿಯಲ್ಲಿ ಹಾಲು ಹಾಕಿ ಅವರೇ 10,000/– ರೂ. ಸಂಬಳ ಕೊಡುತ್ತಿದ್ದಾರೆ. 10,000/– ರೂ. ಸಂಬಳ ಬರುವ ಕೆಲಸ ಎಲ್ಲಾದರೂ ಇದ್ದರೆ ಕೊಡಿಸಿ ಹೋಗಿ ಬಿಡುತ್ತೇವೆಂದು ನಮ್ಮ ಹತ್ತಿರ ಬಂದು ಅಲಿಯುತ್ತಿದ್ದರು. ಈಗ ಹೀರೋ ಹೋಂಡಾ ಬೈಕ್ ಓಡಿಸುತ್ತಾ ಈಗಾಗಲೇ ಸ್ವಿಫ್ಟ್ ಕಾರಿಗೆ ಬಂದಿದ್ದಾರೆ. ಆ ತರಹ ಡೈರಿಗಳನ್ನು ನಡೆಸುತ್ತಿದ್ದಾರೆ. ಅದರಲ್ಲಿ ಏನಾದರೂ ಎಡವಟ್ಟು ಆದರೆ ನಿಜವಾಗಿಯೂ ಎಲ್ಲರೂ ಬೀದಿಗೆ ಬರುತ್ತಾರೆ. ಆದ್ದರಿಂದ ದಯಮಾಡಿ ನೀವು ಹೆಚ್ಚಿನ ರೀತಿಯಲ್ಲಿ ಅದಕ್ಕೆ ಒತ್ತು ಕೊಟ್ಟು ಆ ಉದ್ಯಮವನ್ನು ಹೇಗೆ

ಉಳಿಸುತ್ತೀರಿ ನೋಡಿ. ಮಾನ್ಯ ರೇವಣ್ಣರವರ ಸಲಹೆಯನ್ನು ತೆಗೆದುಕೊಳ್ಳುವುದು ಸೂಕ್ತ ಇದೆ. ನಾನು ಜಂಭಕ್ಕೆ ಹೇಳುವುದಿಲ್ಲ. ಅವರು ಅದರಲ್ಲಿ ಬಹಳ expert ಇದ್ದಾರೆ. ಅವರ ಗುಣಕ್ಕೆ ಮತ್ಸರ ಇಲ್ಲ. ಅವರು ಬಹಳ ವರ್ಷ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ಆದ್ದರಿಂದ ನೀವು ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರನ್ನೂ ತೆಗೆದುಕೊಂಡು ಅದು ಏನು ಮಾಡಬೇಕು? ಯಾವ ರೀತಿ conversion ಮಾಡಬೇಕು? ಹೇಗೆ ಅದನ್ನು by-product ಆಗಿ ತಯಾರು ಮಾಡಬೇಕು ಅನ್ನತಕ್ಕಂಥದ್ದನ್ನು ಬಹಳ ಸ್ಥೂಲವಾಗಿ ಯೋಚನೆ ಮಾಡಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಿ, ಗ್ರಾಮೀಣ ಭಾಗದ ಜನ ಜೊತೆಯಲ್ಲಿ ನಿಜವಾಗಿಯೂ ರೈತರು ಆ ಕೃಷಿ ಬಿಟ್ಟು ಬಿಟ್ಟಿದ್ದಾರೆ. ಮೇವು ತಂದು ಹಸುಗಳಿಗೆ ಹಾಕುವುದು ಹಾಲು ಕರೆದುಕೊಂಡು ಸಾಯಂಕಾಲ ಡೈರಿಗೆ ಹಾಕುವುದು ಇಷ್ಟೇ ಕೆಲಸದಲ್ಲಿದ್ದಾರೆ ಜನ. ಬಹಳ ಶೋಕಿಯಾಗಿದ್ದಾರೆ. ಆ ಭೀತಿ ಇರುವುದರಿಂದ ನಿಮ್ಮ ಇಲಾಖೆ ಬಹಳ ಮಹತ್ವ ತೆಗೆದುಕೊಂಡಿದೆ. ಹಾಲಿನ ದರ 19 ರೂ. ಗೆ ಇಳಿದ ತಕ್ಷಣ ಮನೆಗಳಲ್ಲಿ ಎಲ್ಲ ಜನ ಮುಖ ಜೋತು ಹಾಕಿ ಕೂತಿರುತ್ತಾರೆ. ಏಕೆ ಎಂದು ಕೇಳಿದರೆ, ಹಾಲಿನ ದರ ಬಿದ್ದು ಹೋಗಿದೆ ಎಂದು ಹೇಳುತ್ತಾರೆ. ನಾಲ್ಕು ರೂಪಾಯಿ ಪರಿಹಾರ ಸರ್ಕಾರದಿಂದ ಬಂದಿಲ್ಲ. ಯಾರ್ಯಾರು ಕೊಟ್ಟಿಲ್ಲವೆಂದು ನಾನು ಕೇಳುವುದಕ್ಕೆ ಹೋಗಿಲ್ಲ, ಅವರು ಹೇಳುವುದು. ಇವತ್ತು ಬೆಳಗ್ಗೆ ನನಗೆ ಫೋನ್ ಬಂದಿತು. ನಾವೇಕೆ ವಿಧಾನಸಭೆಯಲ್ಲಿ ಕುಳಿತು ಸುಳ್ಳು ಹೇಳೋಣ ನಾಲ್ಕು ರೂಪಾಯಿ ಪರಿಹಾರ ಬಂದಿಲ್ಲ ನೀವು ಕೇಳಿ ಎಂದು ಜನ ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ಒಳ್ಳೆಯ ಮಹತ್ವದ ವಿಚಾರ ಇವತ್ತು ಚರ್ಚೆಯಾಗಿದೆ. ದಯವಿಟ್ಟು ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು. ಅಧ್ಯಕ್ಷರೆ, ನಿಮ್ಮ ಕಡೆ ಡೈರಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮಲ್ಲಂತೂ ಸುಮಾರು 70 ರಿಂದ 75% ಜನ ಇದೇ ಕೆಲಸ ಮಾಡುವುದು. ಮಹಿಳಾ ಸಂಘಗಳು ಹೆಚ್ಚಾದ ಮೇಲೆ ಅವರಂತೂ ಸಾಲ ತೆಗೆದುಕೊಳ್ಳುವುದು ಹಸು ಇಡುವುದು, ಇದು ಬಿಟ್ಟರೆ ಬೇರೇನೂ ಇಲ್ಲ. ಆದ್ದರಿಂದ ಇದಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಎರಡೇ ಮಾತು.

(ಗೊಂದಲ)

ಶ್ರೀ ಎಂ.ಪಿ. ರವೀಂದ್ರ:– ವಿನಯ್ ಅವರಿಗೆ ಹಾಲಿನ ಡೈರಿಯ ಬಗ್ಗೆ ಹೆಚ್ಚು ಮಾಹಿತಿ ಇರುವಂಥವರು. ಅವರು ಮಾತನಾಡಲಿ.

ಶ್ರೀ ವಿನಯ್ ಕುಲಕರ್ಣಿ (ಧಾರವಾಡ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ.ಟಿ. ರವಿ ಅವರು ಹೇಳಿದ ಹಾಗೆ ಬೇರೆ ರಾಜ್ಯಗಳಿಂದ ಏನು ಹಾಲು ಬರುತ್ತಿದೆ ಆರೋಗ್ಯ ಮಿಲ್ಕ್ ಬಗ್ಗೆ ನಾನು ನಿಮಗೆ ಒಂದು ಉದಾಹರಣೆ ಹೇಳುತ್ತೇನೆ. ಆರೋಗ್ಯ ಮಿಲ್ಕ್ ಬರೀ ಒಂದು ಪ್ಯಾಕೆಟ್ ಹಾಲು ತೆಗೆದುಕೊಂಡು ನೀವು ಟೆಸ್ಟ್ ಮಾಡಿ. ಯಾವ ಹಾಲು ಮಿಕ್ಸ್ ಮಾಡುತ್ತಾರೆಯೋ ಗೊತ್ತಿಲ್ಲ. ಏಕೆಂದರೆ ನಾನು ಸುಮಾರು 22 ವರ್ಷಗಳಿಂದ ನನ್ನ ಡಿಗ್ರಿ ಮುಗಿದಾಗಿನಿಂದ ನಾನು ಹೈನುಗಾರಿಕೆ ನಡೆಸುತ್ತಿದ್ದೇನೆ. ಆದರೆ ನನ್ನ ಜೀವನದಲ್ಲಿ ಇವತ್ತಿನವರೆಗೂ ಅಷ್ಟೊಂದು ದಪ್ಪ ಹಾಲು ನೋಡಿಲ್ಲ. ಯಾವುದೋ ಒಂದು ಹೋಟೆಲ್‌ಗೆ ಹೋಗಿ ಕೇಳಿ. ಯಾವ ಹೊಟೇಲ್‌ದವರೂ ಅದನ್ನು ಬಿಟ್ಟು ಬೇರೆ ಹಾಲು ಉಪಯೋಗಿಸುವುದಿಲ್ಲ. ಮಾನ್ಯ ರೇವಣ್ಣರವರು ಹಾಲು ಉತ್ಪಾದನೆ ಬಗ್ಗೆ ಚರ್ಚೆ ಪ್ರಾರಂಭಿಸಿರುವುದಕ್ಕೆ ನಿಜವಾಗಿಯೂ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ರೈತರು ಇವತ್ತು ಸಂಕಷ್ಟದಲ್ಲಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಮಹಾರಾಷ್ಟ್ರದಲ್ಲಿ ಕೂಡ ತುಂಬ ಕಷ್ಟದಲ್ಲಿದ್ದಾರೆ. ನಾವು ಈಗಾಗಲೇ ಹೈನುಗಾರಿಕೆಯಲ್ಲಿ ನೋಡಿದಂತಹ ಪರಿಸ್ಥಿತಿಯಲ್ಲಿ ಇವತ್ತು ಕೋಲಾರ ಭಾಗವಾಗಲಿ, ಬೆಂಗಳೂರು ಸುತ್ತಮುತ್ತ ಇರುವ ಎಲ್ಲಾ ಜಿಲ್ಲೆಗಳಲ್ಲಿ ತಾಲ್ಲೂಕುಗಳಲ್ಲಿ ಹೈನುಗಾರಿಕೆ ಜೊತೆಗೆ ಹಸು ಮಾರುವುದರ ಬಗ್ಗೆ ಹೆಚ್ಚಿನ ಆಸಕ್ತಿಯಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಕಳೆದ ಎರಡು ಮೂರು ತಿಂಗಳುಗಳಿಂದ ಮಹಾರಾಷ್ಟ್ರದಲ್ಲಿ ಕೂಡ ಇದೇ ಪರಿಸ್ಥಿತಿ ಇದೆ. ಮಹಾರಾಷ್ಟ್ರದಲ್ಲಿ ಕೂಡ ಹಾಲಿನ ದರ ಕಡಿಮೆಯಾಗಿರುವುದರಿಂದ ಮಹಾರಾಷ್ಟ್ರದಲ್ಲಿ ಬೆಂಗಳೂರು surrounding ನವರು ಕರ್ನಾಟಕ ರಾಜ್ಯದವರು ಹೆಚ್ಚಿನ ಹಸುಗಳನ್ನು ಖರೀದಿ ಮಾಡುತ್ತಾರೆ. ಮೂರು –

ನಾಲ್ಕು ತಿಂಗಳುಗಳಿಂದ ಅವರೂ ಕೂಡ ಯಾರೂ ಬರುತ್ತಿಲ್ಲ. ಹಸುಗಳ ಮೇಲೂ ಪರಿಣಾಮವಾಗಿದೆ, ರೈತರಿಗೆ ಹಾಲಿನ ಮೇಲೆ ಕೂಡ ಬಹಳ ದೊಡ್ಡ ಪರಿಣಾಮ ಬೀರುತ್ತದೆ. ಬಹಳ ಕಷ್ಟದಲ್ಲಿ ಬರುವವರು ಎಂದರೆ, ಅವರು ಅದಕ್ಕೆ ನಾನು ನಿಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ದಯವಿಟ್ಟು ಏನು ಕಲಬೆರಕೆ ಹಾಲು ಬರುತ್ತಿದೆ ಅದರ ಬಗ್ಗೆ serious decision ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದು ಬಂದ್ ಆಯಿತು ಎಂದರೆ around 50% problem solve ಆಗುತ್ತದೆ. Adulterated milk ನಮ್ಮಲ್ಲಿ ಜಾಸ್ತಿ ಇದೆ. ಬರೀ ಬೆಂಗಳೂರು ಅಷ್ಟೇ ಅಲ್ಲ, surrounding ಎಲ್ಲಾ ಜಿಲ್ಲೆಗಳಲ್ಲಿ ಕೂಡ ಆಂಧ್ರ ಮತ್ತು ತಮಿಳುನಾಡಿನಿಂದ ಬರುವಂತಹ ಹಾಲು ಸಂಪೂರ್ಣವಾಗಿ ಕಲಬೆರಕೆಯಾಗಿ ಬರುತ್ತದೆ. ಮಹಾರಾಷ್ಟ್ರದಲ್ಲಿ ಕೂಡ ಸೇಮ್ ಇದೆ. ಮಹಾರಾಷ್ಟ್ರದಲ್ಲಿ ಕಲಬೆರಕೆ ಮಾಡುವುದರಿಂದ ನಮ್ಮ ಸೈಡ್ ಉತ್ತರ ಕರ್ನಾಟಕದಲ್ಲಿ ಬರುವ ಹಾಲೆಲ್ಲ ಸಂಪೂರ್ಣ ಕಲಬೆರಕೆಯಾಗಿ ಬರುತ್ತಿದೆ. ಇದನ್ನು ತಡೆಗಟ್ಟುವ ಕೆಲಸ ಸರ್ಕಾರ ಮಾಡಿದಾಗ ಮಾತ್ರ ನಮಗೆ ಶಕ್ತಿ ಬರುತ್ತದೆ ಎಂದು ತಮ್ಮ ಮುಖಾಂತರ ಮನವಿ ಮಾಡುತ್ತೇನೆ.

ಶ್ರೀ ಎಂ.ಪಿ. ರವೀಂದ್ರ (ಹರಪನಹಳ್ಳಿ):– ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ conversion ಮಾಡುವುದಕ್ಕೆ ಅವಕಾಶ ಇಲ್ಲ. KMF ಕಡೆಯಿಂದಲೂ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಕೆಲವು ಖಾಸಗಿ ಕಂಪನಿಯವರು ಮುಂದೆ ಬಂದರೆ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ ಮೂರು ಮೂರು ಯೂನಿಯನ್‌ಗಳು ಮಧ್ಯದಲ್ಲಿ ಬಂಡವಾಳ ಹಾಕಿ conversion ಮಾಡತಕ್ಕಂತಹ ಯೂನಿಟ್‌ಗಳನ್ನು ಹಾಕುತ್ತಾರೆಂದರೆ, ಅದಕ್ಕೂ ಕೂಡ ಪ್ರೋತ್ಸಾಹ ಮಾಡಿದರೆ, ಖಾಸಗಿ ಕಂಪನಿಗಳು ಕೂಡ ಇಲ್ಲಿ conversion factory ಗಳನ್ನು ಹಾಕುವುದಕ್ಕೆ ಅನುಕೂಲವಾಗುತ್ತದೆ. logistics ನಲ್ಲಿ ಸಾಕಷ್ಟು ದುಡ್ಡು ಉಳಿಸಬಹುದು. ಹಾಗಾಗಿ ಖಾಸಗಿ ಕಂಪನಿಗಳಿಗೆ ಪ್ರೋತ್ಸಾಹ ಮಾಡಿದರೆ ಗೋವಾ, ಮಹಾರಾಷ್ಟ್ರ, ಆಂಧ್ರ, ಚೆನ್ನೈ ರಾಜ್ಯಗಳಿಗೆ ಕಳುಹಿಸಿ conversion ಮಾಡಿ logistics ಗೆ ನಾವು ಸಾಕಷ್ಟು ಹಣ ಖರ್ಚು

ಮಾಡುತ್ತಿದ್ದೇವೆ. ಅದರ ಬದಲು ಇಲ್ಲಿಯೇ ಕರ್ನಾಟಕದಲ್ಲಿ ನಮ್ಮ ಉದ್ಯಮಿಗಳಿಗೆ ಖಾಸಗಿ ಕಂಪನಿಗಳಿಗೆ ನಾವು ಉತ್ತೇಜನ ನೀಡಿದರೆ ಇಲ್ಲಿಯೇ conversion ಆಗುವುದರಿಂದ ಮೂರು ಒಕ್ಕೂಟಗಳ ನಡುವೆ ಯಾವುದಾದರೂ ಒಂದು ಜಾಗದಲ್ಲಿ logistics ಹತ್ತಿರ ಆಗತಕ್ಕಂತಹ ಜಾಗಗಳಲ್ಲಿ ಖಾಸಗಿ ಕಂಪನಿಯವರಿಗೆ ಏಕೆಂದರೆ KMF ಮುಖಾಂತರ ನಾವು ಅದನ್ನು ಈಗ implement ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ನಾವು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಖಾಸಗಿ ಕಂಪನಿಗಳಿಗೆ ನಾವು ಅವಕಾಶ ಮಾಡಿ ಕೊಟ್ಟಿದ್ದೇ ಆದರೆ logistics ನಲ್ಲಿ ನಾವು ಸಾಕಷ್ಟು ಹಣವನ್ನು ಉಳಿಸುವುದರ ಮುಖಾಂತರ ಯೂನಿಯನ್‌ಗೆ ಸ್ವಲ್ಪ ಸಹಕಾರವಾಗುತ್ತದೆ ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನಾವು ಡೈರಿಗೆ ಸಂಬಂಧಪಟ್ಟಂತೆ ಹೇಳಬೇಕು.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ನಮಗೆ manufactured ಹಾಲು chemical based ಬರುತ್ತಿದೆ ಎನ್ನುವುದನ್ನು ಹೇಳಿದ್ದೇವೆ ಎಂಟು ಲಕ್ಷ ಲೀಟರಷ್ಟು chemical based ಹಾಲು ಬೆಂಗಳೂರಿಗೆ supply ಆಗುತ್ತಿದೆ. ಎಷ್ಟು ಕಡೆ ಟೆಸ್ಟ್ ಮಾಡಿ ಆ chemical based ಹಾಲಿನ ಮೇಲೆ ಕೇಸ್ ಹಾಕುವಂತಹ ಕೆಲಸ ನಮ್ಮಿಂದ ನಡೆದಿದೆ? ನೀವು ಅದನ್ನು ನಿಯಂತ್ರಿಸಬೇಕು, ಇಲ್ಲದಿದ್ದರೆ ಜನರ ಆರೋಗ್ಯವೂ ಹಾಳಾಗುತ್ತಿದೆ, ಕ್ಯಾನ್ಸರ್‌ನಂತಹ ಕಾಯಿಲೆಗಳು ಬರುತ್ತಿವೆ. ತಮಿಳುನಾಡಿನ ಈರೋಡ್ ಆ ಕಡೆಯಿಂದ ಆರೋಗ್ಯ ಇನ್ನಿತರ ಹಾಲು ಬರುತ್ತದಲ್ಲ ಅಲ್ಲಿ ಅಷ್ಟು ಡೈರಿಗಳೇ ಇಲ್ಲ. ಡೈರಿಯೇ ಇಲ್ಲದಿದ್ದರೆ ಹಾಲು ಹೇಗೆ ಉತ್ಪಾದನೆಯಾಗುತ್ತದೆ? ಎಲ್ಲಿಯೋ manufacture ಆದ ಹಾಲು ತಕ್ಷಣ ರೈಡ್ ಮಾಡಿಸಿ ಅವೆಲ್ಲವನ್ನು seize ಮಾಡುವ ಕೆಲಸ ಮಾಡಿದರೆ ಅಷ್ಟು ಮಾರುಕಟ್ಟೆ ಇಲ್ಲಿ develop ಆಗುತ್ತದೆ. ಎರಡನೆಯದು, surplus ಇದೆ. Waste ಆಗುತ್ತಿದೆ ಎಂದರೆ ಅಪೌಷ್ಟಿಕತೆಯಿಂದ ಬಳಲುತ್ತಿರುವವರಿಗೆ ಸಮಾಜ ಕಲ್ಯಾಣ ಇಲಾಖೆ

ಕಡೆಯಿಂದ ಗರ್ಭಿಣಿ ಸ್ತ್ರೀಯರಿಗೆ ಅಂಗನವಾಡಿಗಳಿಗೆ ಸಪ್ಲೈ ಮಾಡುವುದಕ್ಕೆ ವ್ಯವಸ್ಥೆ ಮಾಡಿ. Powder conversion ಗೆ 1,500 ಕಿ.ಮೀ. ಏಕೆ ಹೋಗಬೇಕು? ಇಲ್ಲಿ ಏಕೆ ಹಾಕಬಾರದು? 72 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುವಂತಹ ಕಡೆಗಳಲ್ಲಿ ನಾವು KMF ಆದರೂ ಯೋಚನೆ ಮಾಡಬೇಕು ಅಥವಾ ಸಹಕಾರಿ ಮಿಲ್ಕ್ ಯೂನಿಯನ್‌ಗಳಿಗೆ ನಾವು ಬಡ್ಡಿ ರಹಿತ ಸಾಲ ಕೊಟ್ಟಾದರೂ ಕೂಡ ಯೂನಿಟ್ ಹಾಕಿಸುವಂತಹ ವ್ಯವಸ್ಥೆ ಮಾಡಬೇಕು. ಇಲ್ಲ ಹಾಲು ಹಾಳಾಗುತ್ತದೆ. ತಕ್ಷಣ ಸರ್ಕಾರ ಮಾಡಬೇಕಾಗಿರುವುದು ನಾಲ್ಕು ರೂಪಾಯಿ 5 ರೂಪಾಯಿ ಕಡಿತಗೊಳಿಸುತ್ತಿದ್ದಾರಲ್ಲ ಅದನ್ನು ಕಡಿತಗೊಳಿಸಬಾರದು ಎಂದು ಆದೇಶ ಕೊಡಿ. Milk Union ಗೆ ಸರ್ಕಾರ ಬಡ್ಡಿ ರಹಿತ ಸಾಲ ಕೊಡುತ್ತದೋ ಅಥವಾ ಬೇರೆ ರೀತಿಯಲ್ಲಿ ಸಹಾಯ ಮಾಡುತ್ತದೋ ಅವರ ನೆರವಿಗೆ ಬನ್ನಿ. ನೀವು ಅವರ ನೆರವಿಗೆ ಬಂದು milk union ಮುಳುಗಿದರೆ ಕೆಳಗಡೆ ರೈತರು ಮುಳುಗುತ್ತಾರೆ. ಇವರು ಕೈ ಎತ್ತಿದರೆ ಅವನ ಗತಿ ಏನಾಗಬೇಕು? 23 ಲಕ್ಷ ಕುಟುಂಬಗಳು ಇದರ ಮೇಲೆ ನೇರವಾಗಿ ಅವಲಂಬಿತವಾಗಿವೆ. ಗಂಭೀರತೆಯನ್ನು ಅರ್ಥ ಮಾಡಿಕೊಂಡು ಈಗಿರುವ ಪರಿಸ್ಥಿತಿಗೆ ನಾವು ಪರಿಹಾರ ಕಂಡುಹಿಡಿಯುವಂತಹ ಯೋಚನೆ ಮಾಡಬೇಕು. ಅದನ್ನೇ ಮಾಡಬೇಕಾಗಿರುವುದು, ಅದು ಬಿಟ್ಟರೆ ಬೇರೆ ಏನೂ ದಾರಿ ಇಲ್ಲ. ಅದರ ಕಡೆಗೆ ಯೋಚನೆ ಮಾಡಬೇಕು.

ಶ್ರೀ ಸಿ.ಎನ್. ಬಾಲಕೃಷ್ಣ (ಶ್ರವಣಬೆಳಗೊಳ):– ಮಾನ್ಯ ಅಧ್ಯಕ್ಷರೆ, ಡೈರಿ ಹಾಲು ಹೆಚ್ಚಿಗೆ ಉತ್ಪಾದನೆಯಾಗುತ್ತಿರುವ ಬಗ್ಗೆ ರೈತರು ಆತಂಕದಲ್ಲಿರುವಂತಹ ಸಂದರ್ಭದಲ್ಲಿ ಇವತ್ತು ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪವಾಗಿದೆ. ಸುಮಾರು 425 ಮೆಟ್ರಿಕ್ ಟನ್ ಹಾಲು ಇದೆ. 2012 ನೇ ಸಾಲಿನಲ್ಲಿ ರಾಜ್ಯದಲ್ಲೀ ಇಂತಹ ಪರಿಸ್ಥಿತಿ ರಾಜ್ಯದಲ್ಲಿ ಉದ್ಭವವಾದಾಗ 50% ಸಹಾಯಧನವನ್ನು ಕೊಡುವುದು, ಅವರಿಗೆ ಬಡ್ಡಿ ರಹಿತ ಸಾಲವನ್ನು ಕೊಡತಕ್ಕಂತಹ ತೀರ್ಮಾನ ಈ ರಾಜ್ಯದಲ್ಲಿ ಆಗಿದೆ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ 285 ಡೈರಿಗಳು ಇವೆ.

ಒಂದು ತಿಂಗಳಿಗೆ 15 ಕೋಟಿ ಪೇಮೆಂಟ್ ಆಗುತ್ತದೆ. ನಾವು ಹಳ್ಳಿಗಳಿಗೆ ಹೋದಂತಹ ಸಂದರ್ಭದಲ್ಲಿ ಏನು ಮಾಡುತ್ತಿದ್ದೀರಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಿಲ್ಲವಾ? ಸಹಾಯಧನ ಕೊಡಿಸುವುದಿಲ್ಲವಾ ಎನ್ನುವ ಒಂದು ಭಾವನೆಯಲ್ಲಿ ಜನ ಮಾತನಾಡುತ್ತಿದ್ದಾರೆ. ಐದು ಆರನೇ ತಾರೀಖು ಆದರೂ ಪೇಮೆಂಟ್ ಆಗುತ್ತಿಲ್ಲ. ಇವತ್ತು ನಮ್ಮ ಹಾಸನ ಹಾಲು ಒಕ್ಕೂಟಕ್ಕೆ ನಾವು ಹೋಲಿಕೆ ಮಾಡಿದರೆ 19 ರೂ. ದರ ಆಗಿದೆ. ಒಂದು ಲೀಟರ್ ಮಿಲ್ಕ್ ಹಸು ಎಮ್ಮೆಯಲ್ಲಿ ಉತ್ಪಾದನೆ ಮಾಡಬೇಕಾದರೆ, ಆ ತಾಯಿಗೇ ಗೊತ್ತು. ಮೇವು ಹಾಕಿ ಹಾಲು ಕರೆದು ಹಾಲು ಹಾಕುವುದಕ್ಕೆ ಎಷ್ಟು ಕಷ್ಟ ಇದೆ ಎಂದು. ದಯಮಾಡಿ ಇವತ್ತು 200 ಕೋಟಿ ಪೌಡರ್ ದಾಸ್ತಾನಿನಿಂದ ನಷ್ಟವಾಗಿದೆ. ಅದನ್ನು ಕಡೆಯ ಪಕ್ಷ 50% ಆದರೂ ರಾಜ್ಯ ಸರ್ಕಾರ ಭರಿಸುವುದಕ್ಕೆ ಅವಕಾಶ ಮಾಡಬೇಕು. ಮಾನ್ಯ ರೇವಣ್ಣರವರು ಹೈನುಗಾರಿಕೆಯಲ್ಲಿ ಅವರ ಸಾಧನೆ ಈ ರಾಜ್ಯಕ್ಕೇ ಗೊತ್ತಿರುವಂತಹ ವಿಚಾರ. ಅದರ ಬಗ್ಗೆ ಮಾನ್ಯ ವಿನಯ್ ಕುಲಕರ್ಣಿಯವರೂ ಕೂಡ ಹೇಳಿದರು. ಬೆಳಗಾವಿ ಅಧಿವೇಶನಕ್ಕೆ ಹೋದಂತಹ ಸಂದರ್ಭದಲ್ಲಿ ಮಾನ್ಯ ಸ್ನೇಹಿತರಾದ ವಿನಯ್ ಕುಲಕರ್ಣಿಯವರ ಫಾರಂಗೆ ಹೋಗಿದ್ದೆವು. ಯಾವ ನ್ಯೂಜಿಲೆಂಡ್ ಆಸ್ಟ್ರೇಲಿಯಾಕ್ಕೆ ಹೋಗಿ ನೋಡಬೇಕಾಗಿಲ್ಲ. ಫಾರಂ ನೋಡಿದರೆ ಇಂತಹ ವ್ಯವಸ್ಥೆಯಲ್ಲಿ ಈ ರಾಜ್ಯದಲ್ಲಿ ಒಬ್ಬರು ಶಾಸಕರಾಗಿ ತಂದಿರುವುದು ನಿಜವಾಗಿ ಪ್ರಶಂಸನೀಯವಾದ ವಿಚಾರ. ಸುಮಾರು ಒಂದು ಸಾವಿರ ಹಸುಗಳನ್ನು ಸಾಕಿದ್ದಾರೆ. 250 ಎಮ್ಮೆಗಳನ್ನು ಸಾಕಿದ್ದಾರೆ ಒಂದು ದಿವಸಕ್ಕೆ ಸುಮಾರು 7500 ಲೀಟರ್ ಹಾಲಿನ ಉತ್ಪಾನೆಯಾಗುತ್ತಿದೆ. ಅವರ ಫಾರಂಗೆ ಹೋಗಿ ಸುಮಾರು ಎರಡೂವರೆ ಮೂರು ಗಂಟೆಗಳ ಕಾಲ ಕಳೆದೆ. ಒಂದು ವರ್ಷಕ್ಕೆ ಸುಮಾರು ಒಂಭತ್ತು ಕೋಟಿ ರೂಪಾಯಿ ವಹಿವಾಟು ಮಾಡುತ್ತಿದ್ದಾರೆ. ನಿಜವಾಗಿಯೂ ಒಬ್ಬ ಶಾಸಕರಾಗಿ ಮಾದರಿಯಾಗಿ ಈ ರಾಜ್ಯದಲ್ಲಿ ಒಬ್ಬ ರೈತರ ಭಾವನೆಗಳನ್ನು ಅರ್ಥ ಮಾಡಿಕೊಂಡಿರುವುದು ನಮ್ಮ ರಾಜ್ಯಕ್ಕೆ ಹೆಮ್ಮೆ ಎಂಬುದು ನನ್ನ ಭಾವನ. ಇವತ್ತು ಮಾನ್ಯ ರೇವಣ್ಣನವರ ಬಗ್ಗೆ ಕೂಡ ಪ್ರಶಂಸನೀಯವಾದ ಮಾತುಗಳನ್ನು ಆಡಿದರು. ಏಕೆಂದರೆ ಮಾನ್ಯ ರೇವಣ್ಣರವರು ಈ ರಾಜ್ಯದಲ್ಲಿ ಹತ್ತು ವರ್ಷಗಳ ಕಾಲ KMF ಆಡಳಿತವನ್ನು

ಹಿಡಿದುಕೊಂಡಿದ್ದರು. ಅವರು ಆಡಳಿತ ಹಿಡಿದುಕೊಂಡಾಗ ಬರೀ 250 ಕೋಟಿ ವಹಿವಾಟು ಇತ್ತು. ಅವರು ಅಧಿಕಾರ ಬಿಟ್ಟು ಕೊಟ್ಟಾಗ 4,000 ಕೋಟಿಗೂ ಹೆಚ್ಚು ವಹಿವಾಟು ಮಾಡಿದ್ದರು. ಈ ಹೈನುಗಾರಿಕೆ ಉಳಿಯಬೇಕು. ಅವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಶೆಟ್ಟಿಹಳ್ಳಿ ಹತ್ತಿರ ಸುಮಾರು ಎರಡು ಲಕ್ಷ ಲೀಟರ್ ಪ್ರತಿವರ್ಷ conversion ಆಗತಕ್ಕಂತಹ ಹೈಟೆಕ್ plant ಮಾಡಿದರು. ಮೆಗಾ ಡೈರಿ ಮಾಡಿದರು. ಮೊನ್ನೆ ಸಹಕಾರಿ ಸಚಿವರು ಸಹಕಾರಿ ಇಲಾಖೆ ಬೇಡಿಕೆ ಮೇಲೆ ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಅವರು ಉತ್ತರ ನೀಡುತ್ತಾ ಪರಿವರ್ತನಾ ಘಟಕಗಳನ್ನು ನಾವು ಮುಂದಿನ ದಿನಗಳಲ್ಲಿ ಮಾಡುತ್ತೇವೆಂಬ ಆಶ್ವಾಸನೆಯನ್ನು ನೀಡಿದರು. ಮುಂದೆ ಮಾಡತಕ್ಕಂಥದ್ದು next. ಆದರೆ ಇವತ್ತು ಈ ಉದ್ಯಮ ಏನು ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದೆ, ರೈತರನ್ನು ಪಾರು ಮಾಡತಕ್ಕಂಥದ್ದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. 2012–13 ನೇ ಸಾಲಿನಲ್ಲಿ ಏನು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ, ಮೊನ್ನೆ ಕೂಡ ಕೂಡ ರಾಜ್ಯದ ಮುಖ್ಯ ಮಂತ್ರಿಗಳು ಪಶುಸಂಗೋಪನಾ ಸಚಿವರು, ಸಹಕಾರ ಸಚಿವರೂ ಸೇರಿ ಒಂದು ಮೀಟಿಂಗ್ ಆಗಿದೆ, ಅದು ಕಾರ್ಯರೂಪಕ್ಕೆ ಬಂದು ರೈತರ ನೆರವಿಗೆ 50% ಏನು ಲಾಸ್ ಆಗಿದೆ ಅದನ್ನು 13 ಒಕ್ಕೂಟಗಳಿಗೆ ತುಂಬಿ ಕೊಟ್ಟು ರೈತರನ್ನು ಉಳಿಸತಕ್ಕಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ್ (ಮಲ್ಲೇಶ್ವರಂ):– ಮಾನ್ಯ ಅಧ್ಯಕ್ಷರೆ, ಕೆಲವೊಂದು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಹಾಲಿನ ಕಲಬೆರಕೆ ಬಗ್ಗೆ ಸರ್ಕಾರದ ಎಲ್ಲ ಅಧಿಕಾರಿಗಳಿಗೂ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ. ಎಲ್ಲಿ ಈ ಕಲಬೆರಕೆ ಹಾಲು ಬರುತ್ತಿದೆ ಎಂಬುದು ಸಹ ಗೊತ್ತಿದೆ. ಈ ಕೆಲಬೆರಕೆ ಹಾಲನ್ನು ತಡೆಯುವುದಕ್ಕೆ ಕ್ರಮ ಆಗಬೇಕು.

ಅಧ್ಯಕ್ಷರು:– ಕಲಬೆರಕೆ ಹಾಲಿಗೆ ಯಾವ material mix ಮಾಡುತ್ತಾರೆ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ್:– ಮಾನ್ಯ ಅಧ್ಯಕ್ಷರೆ, ಯೂರಿಯಾ use ಮಾಡುತ್ತಾರೆ. ಇದಲ್ಲದೇ ಬೇರೆ ಬೇರೆ ಪದಾರ್ಥಗಳನ್ನು ಬಳಕೆ ಮಾಡುತ್ತಾರೆ. ಮುಖ್ಯವಾಗಿ ಈ ಸ್ಥಳ ಎಲ್ಲೆಲ್ಲಿದೆ ಮತ್ತು ಯಾರು ಯಾರು ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತು.

ಅಧ್ಯಕ್ಷರು:– ಹಾಗಾದರೆ ಹೇಳಿ ಎಲ್ಲಿ ಕಲಬೆರಕೆ ಮಾಡುತ್ತಿದ್ದಾರೆಂದು?

ಡಾ॥ ಸಿ.ಎನ್. ಅಶ್ವತ್ಥನಾರಾಯಣ್:– ಇದನ್ನು ತಡೆಯುವುದಕ್ಕೆ ಅಧಿಕಾರಿಗಳು ಹೆದರಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು:– ಅದು ಆಮೇಲಿನ ವಿಚಾರ. ಮೊದಲು ನಿಮೆ ಕಲಬೆರಕೆ ಎಲ್ಲಾ ಗೊತ್ತಿದ್ದರೆ ಹೇಳಿ. ಕಲಬೆರಕೆ ಮಾಡುವ ಘಟಕಗಳು ಎಲ್ಲಿದೆಯೆಂದು ಹೇಳಿ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ್:– Almost ಎಲ್ಲ commercial area ಗಳಲ್ಲಿ, ಬೆಂಗಳೂರು ಸಿಟಿಯಲ್ಲಿ ಕೂಡ, ನಾನು ಏಕೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ,

ಅಧ್ಯಕ್ಷರು:– ರೀ ಡಾಕ್ಟ್ರೆ, ನಾನು ಹೇಳುವುದನ್ನು ಕೇಳಿ. ಈಗ ನಿಮಗೆ ಗೊತ್ತಿರುವ ಪ್ರಕಾರ ಕಲಬೆರಕೆ ಮಾಡುವ ಘಟಕಗಳಿದ್ದರೆ ಹೇಳಿ. ಸರ್ಕಾರ ಈಗಲೇ ಅದನ್ನು ಮುಚ್ಚುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ

ಡಾ॥ ಸಿ.ಎನ್. ಅಶ್ವತ್ಥನಾರಾಯಣ್:– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಸುಪ್ರೀಂಕೋರ್ಟ್‌ನಲ್ಲಿಯೂ ವಿಶೇಷ ಪ್ರಕರಣವೆಂದು ತೆಗೆದುಕೊಂಡು ಇದಕ್ಕೆ ಮರಣದಂಡನೆಯನ್ನು ಕೊಡಬೇಕೆಂದು ಹೇಳಿದ್ದಾರೆ.

ಅಧ್ಯಕ್ಷರು:– ಅದೆಲ್ಲಾ ಈಗ ಬೇಡ. ಈಗ ಇಲ್ಲಿಯದ್ದನ್ನು ಹೇಳಿ ಎಂದರೆ ಅಲ್ಲಿಗೆ ಹೋದ್ರು, ಬೆಂಗಳೂರಿನಲ್ಲಿ ನಿಮಗೆ ತಿಳಿದ ಪ್ರಕಾರ ಕಲಬೆರಕೆ ಘಟಕಗಳು ಎಲ್ಲಿವೆ ಹೇಳಿ.

ಡಾ|| ಸಿ.ಎನ್. ಅಶ್ವತ್ಥನಾರಾಯಣ್:- ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಹೆಚ್ಚುಕಡಿಮೆ ಎಲ್ಲಾ ಹೋಟೆಲ್‌ನಲ್ಲಿರುವುದು ಕಲಬೆರಕೆ ಹಾಲೇ ಆಗಿದೆ. ಈಗ ಯಾರನ್ನು Food Adulteration Act ಪ್ರಕಾರ ಒಬ್ಬ ಅಧಿಕಾರಿಯೂ ಯಾವ ಕೇಸ್ ಬುಕ್ ಮಾಡುವುದಕ್ಕೂ ಹೋಗದೆ ಧೈರ್ಯವೇ ಇಲ್ಲದೆ ಕುಳಿತಿದ್ದಾರೆ. ಏಕೆಂದರೆ ಅಧಿಕಾರಿಗಳಿಗೆ ಬೆದರಿಕೆಗಳಿವೆ, ರೌಡಿಗಳು ಬೆದರಿಸುತ್ತಾರೆ.

ಅಧ್ಯಕ್ಷರು:- ಅಧಿಕಾರಿಗಳು ಹೋಟೆಲ್‌ಗೆ ಹೋಗಿ raid ಮಾಡುತ್ತಾನೆ ಎಂದು ತಿಳಿದುಕೊಳ್ಳಿ. ನಾಳೆ ನೀವೇ ಆ ಅಧಿಕಾರಿಯನ್ನು transfer ಮಾಡಿಸುತ್ತೀರಿ.

ಡಾ|| ಸಿ.ಎನ್. ಅಶ್ವತ್ಥನಾರಾಯಣ್:- ಮಾನ್ಯ ಅಧ್ಯಕ್ಷರೆ, ನಾನು ಆ ರೀತಿ ಮಾಡುತ್ತೇನೆ?

ಅಧ್ಯಕ್ಷರು:- ನೀವು ಅಂದರೆ ಅದರರ್ಥ ಶಾಸಕರೆಂದು.

ಡಾ|| ಸಿ.ಎನ್. ಅಶ್ವತ್ಥನಾರಾಯಣ್:- ನಾನು ಕಾನೂನು ಪರವಾಗಿ ಕೆಲಸ ಮಾಡಬೇಕೆಂದು ಇಲ್ಲಿಗೆ ಬಂದಿರುವಂಥದ್ದು. ಹೀಗಿರುವಾಗ ಇಲ್ಲಿ ಕಾನೂನು ಪರವಾಗಿಯೇ ಕೆಲಸ ಮಾಡಲಿಲ್ಲವೆಂದರೆ ಇನ್ನು ಸಮಾಜವನ್ನು ಕಾಪಾಡುವುದು ಹೇಗೆ? ಇಂಥ ವ್ಯಕ್ತಿಗಳ ಪರವಾಗ ನಾವು ಕೆಲಸ ಮಾಡಿದರೆ ಇನ್ನು ಏಕೆ ಈ ಸಾಮಾಜಿಕ ಜೀವನದಲ್ಲಿ ಕೆಲಸ ಮಾಡಲು ಬರಬೇಕು, ಜನಪ್ರತನಿಧಿಗಳಾಗಿ ಏಕೆ ಕೆಲಸ ಮಾಡಬೇಕು. ಇದನ್ನು ತಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡಿದೆ.

ಅಧ್ಯಕ್ಷರು:- ಆಯಿತು ಹೇಳಿ.

ಡಾ|| ಸಿ.ಎನ್. ಅಶ್ವತ್ಥನಾರಾಯಣ್:- ಡಾಕ್ಟ್ರೆ, ಕಲಬೆರಕೆ ಹಾಲಾಗಲು ಸಕ್ಕರೆಯನ್ನು ಮಿಕ್ಸ್ ಮಾಡುತ್ತಾರೆ, ಸಕ್ಕರೆ, ಮೈದಾಹಿಟ್ಟು ಮಿಕ್ಸ್ ಮಾಡುತ್ತಾರೆ. ಗಣಸಿನ ಪುಡಿಯನ್ನು ಕೂಡ ಮಿಕ್ಸ್ ಮಾಡುತ್ತಾರ. ಗಣಸನ್ನು ಒಣಗಿಸಿ ಅದರ ಪುಡಿಯನ್ನು ಮಿಕ್ಸ್ ಮಾಡುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಹೊಟ್ಟೆ ನುಲಿತ ಬಂತೆಂದರೆ, urea ಮತ್ತು ಸಕ್ಕರೆ ಎರಡನ್ನೂ ಮಿಕ್ಸ್ ಮಾಡಿದ್ದಾರೆಂದು ಅರ್ಥ.

ಅಧ್ಯಕ್ಷರು:– ಆಯಿತಪ್ಪಾ, ಆ ಕಂಪನಿಗಳು ಎಲ್ಲಿವೆಯೆಂದು ಹೇಳಿದರೆ raid ಮಾಡುತ್ತಾರಪ್ಪಾ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, Private sector ನವರು ಮಾಡುತ್ತಾರೆ. ಈ ಸಹಕಾರಿ ರಂಗದ ಸಂಸ್ಥೆಯಲ್ಲಿ ಆಗುವುದಿಲ್ಲ. ಆದರೆ Private sector ನವರು ಮಾಡುತ್ತಾರೆ.

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡೋಣ. ರೇವಣ್ಣ, ನಮ್ಮ ಊರಿನಲ್ಲಿ ಸಿಗಂದೂರು ದೇವಿ ಎಂದು ಈಗ ಹುಟ್ಟಿದ್ದಾಳೆ. ಚೌಡೇಶ್ವರಿ, ಅಲ್ಲಿ ಹೋಗಿ ಹರಕೆ ಮಾಡಿಕೊಂಡು ಯಾರು ಯಾರು ಎಲ್ಲೆಲ್ಲಿದ್ದಾರೆ ಎಂದು ತಿಳಿಸಿಕೊಡವ್ವಾ ಎಂದು ಹರಕೆ ಮಾಡೋಣವಂತೆ. ಆಗ ಗೊತ್ತಾದರೆ raid ಮಾಡಬಹದು.

ಶ್ರೀ ಸಿ.ಎನ್. ಬಾಲಕೃಷ್ಣ:– ಅಂಜನ ಹಾಕಿಸಬೇಕು.

ಡಾ|| ಸಿ.ಎನ್. ಅಶ್ವತ್ಥನಾರಾಯಣ್:– ಮಾನ್ಯ ಅಧ್ಯಕ್ಷರೆ, ಇನ್ನು ಒಂದೆರಡು ವಿಚಾರಗಳನ್ನು ಹೇಳಿಬಿಡುತ್ತೇನೆ. ನಮ್ಮಲ್ಲಿ ಈಗಾಗಲೇ ಈ milk ನಿಂದ by-products ಆಗಿ commercial ಆಗಿ sweet ಮಾಡುವುದಕ್ಕೆ Ice cream ಮಾಡುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಿಲ್ಲ. ಇನ್ನೂ ವ್ಯಾಪಕವಾಗಿ commercial ಆಗಿ by-products ಅನ್ನು ಜಾಸ್ತಿ ಮಾಡಿ ಈ ಬಳಕೆಯನ್ನು ಬೇರೆ ಬೇರೆ ರೀತಿಯಲ್ಲಿ by-products ಹೆಚ್ಚಿಸಬೇಕು. ಕೇವಲ milk powder ಗೆ convert ಮಾಡಿದರೆ ಕೇವಲ ಅದರ stock ಹೆಚ್ಚುತ್ತಾ ಹೋಗುತ್ತದಷ್ಟೆ.

ಅಧ್ಯಕ್ಷರು:– By-products ಏನೇನು ಎಂಬುದನ್ನು ಹೇಳಿ.

ಡಾ|| ಸಿ.ಎನ್. ಅಶ್ವತ್ಥನಾರಾಯಣ್:– ಈಗ Ice cream, sweets ಮಾಡಬಹುದು. ಇವತ್ತು ಸರ್ಕಾರ ಜಾರಿಗೆ ತಂದಿರುವ ಕ್ಷೀರ ಭಾಗ್ಯ

ಯೋಜನೆಯಲ್ಲಿ ಮಕ್ಕಳಿಗೆ ಹಾಲು ಕೊಡುವಂಥದ್ದಿರಬಹುದು, ಈಗ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹಾಲನ್ನು ಮೂರು ದಿನ ಮಾತ್ರ ಕೊಡುತ್ತಿದ್ದಾರೆ. ಮಾನ್ಯ ರವಿಯವರು ಹೇಳಿದ ಹಾಗೆ ಇನ್ನೂ ಹೆಚ್ಚಿನ ದಿನ ಕೊಟ್ಟರೆ ಹಾಲಿನ consumption increase ಮಾಡಲು ಅನುಕೂಲವಾಗುತ್ತದೆ. ಬೇರೆ ದೇಶದಲ್ಲಿ ಹಾಲಿನ ಬೆಲೆ ಕಾಪಾಡುವುದಕ್ಕೆ ಸಮುದ್ರಕ್ಕೆ ಸುರಿಯುತ್ತಾರೆ. ಆದರೆ ನಮ್ಮ ದೇಶದಲ್ಲಿ ಹಾಲು ಕುಡಿಯಲು ಅವಶ್ಯಕತೆ ಇರುವ ಜನರಿಗೆ ಅದನ್ನು ಕೊಂಡು ಕುಡಿಯಲು ಆರ್ಥಿಕ ಶಕ್ತಿಯಿಲ್ಲದೆ ಒದ್ದಾಡುತ್ತಾರೆ. ಇಂಥ ಜನರಿಗೆ ಹಾಲು ಕುಡಿಯುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟರೆ ಆ ಮೂಲಕವಾದರೂ ಬೆಲೆಗಳನ್ನು ಕಾಪಾಡಬಹುದು. ಬಹಳ ಉತ್ತಮವಾದಂಥ ಯೋಚನೆ. ಇದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಇವತ್ತು Milk Federation ನಲ್ಲಿ milk societies ಏನಿವೆ ಆ milk society ಗಳಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಆ society ಯಲ್ಲಿನ ಕೆಲವು union ಗಳು ಹಾಲಿಗೆ ನೀರನ್ನು ಬೆರೆಸುವುದು, ಇದಲ್ಲದೇ ಅವರು ಹೇಳಿದಂತೆ ಮೈದಾ, ಗೆಣಸಿನ ಪುಡಿ, ಸಕ್ಕರೆ ಇನ್ನೂ ಏನೇನೋ mix ಮಾಡುತ್ತಿದ್ದಾರೆ. ಈ ರೀತಿ milk union ನವರು ಸಹ ಮಾಡುತ್ತಿದ್ದಾರೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಡಾಕ್ಟ್ರೆ, ದಯವಿಟ್ಟು ತಾವು ತಪ್ಪಾಗಿ ಹೇಳಬಾರದು. ಯೂನಿಯನ್‌ನವರು ಕಲಬೆರಕೆ ಮಾಡುತ್ತಿಲ್ಲ. ಆ ಸೊಸೈಟಿಗೆ ರೈತರುಗಳೇನು ಹಾಲು ಹಾಕುವುದಕ್ಕೆ ಬರುತ್ತಾರಲ್ಲಾ, ಅವರಲ್ಲಿ ಕೆಲವರು ಹಾಲಿನಲ್ಲಿ fat degree ಹೆಚ್ಚು ಬರಲಿ ಎಂದು ಆ ರೀತಿ ಮಾಡುತ್ತಾರೆ. ನೂರಾರು ಜನರು ಹಾಲನ್ನು ಸೊಸೈಟಿಗೆ ಹಾಕುತ್ತಾರೆ. ಅದರಲ್ಲಿ ಕೇವಲ ಒಬ್ಬರು ಈ ರೀತಿ mistake ಮಾಡಿದರೂ ಕೂಡ COB, low SNF ಆಗುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು:– ಆಯಿತು, ಡಾಕ್ಟ್ರೆ, ಬೇಗ ಪೂರ್ಣ ಮಾಡಿ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ್:– ಮಾನ್ಯ ಅಧ್ಯಕ್ಷರ, ಒಂದು ನಿರ್ಧಿಷ್ಟವಾದಂಥ ಬೆಲೆ ಸಿಕ್ಕಿರುವುದು ಈ ಒಂದು ಹೈನುಗಾರಿಕೆಯಲ್ಲಿ. ಅದನ್ನು ಉಳಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡಬೇಕು. ಸರ್ಕಾರದ

ಕೆ.ಎಂ.ಎಫ್. ನಿಂದ Ice cream ಆಗಲಿ, sweets ಆಗಲಿ ಮಾಡಿ ಇನ್ನೂ ಹೆಚ್ಚು ಪರಿಣಾಮಕಾರಿಯಗಿ production ಹೆಚ್ಚಿಸುವ ಪ್ರಯತ್ನ ಮಾಡಬೇಕು ಮತ್ತು market ಒದಗಿಸುವುದರಲ್ಲಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಿರಿಯ ಸಹಕಾರಿಗಳಾಗಿರತಕ್ಕಂಥ ಮಾನ್ಯ ರೇವಣ್ಣನವರು ಒಂದು ಮೂಲಭೂತ ಪ್ರಶ್ನೆಯನ್ನಿಟ್ಟುಕೊಂಡು ಇದನ್ನು ಕೇಳಿದರು. ಇಡೀ ರಾಜ್ಯದಲ್ಲಿರತಕ್ಕಂಥ 13 ಒಕ್ಕೂಟಗಳು ಇವತ್ತು ಹಾನಿಯನ್ನು ಅನುಭವಿಸತಕ್ಕಂಥದ್ದನ್ನು ತಡೆಯಬೇಕಾಗಿರತ್ಕಂಥದ್ದು ಒಂದು ವಿಚಾರ. ಅದರ ಜೊತೆಗೆ ಈ ಹಾಲಿನ ಉದ್ದಿಮೆಯನ್ನು ಅವಲಂಬಿಸಿರತಕ್ಕಂಥ ಕುಟುಂಬಗಳಿಗೆ ತೊಂದರೆ ಆಗಬಾರದು ಎನ್ನತಕ್ಕಂಥ ಎರಡು ವಿಚಾರಗಳನ್ನಿಟ್ಟುಕೊಂಡು ಈ ಮೂಲಭೂತ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ನನಗೂ ಸ್ವಲ್ಪ ಆಸಕ್ತಿಯಿದೆ. ನಾನು ಕೂಡ ಒಂದು ಸಹಕಾರಿ ತಳಹದಿಯ ಮೇಲೆಯೇ ಒಂದು ಡೈರಿಯನ್ನು ನಡೆಸುತ್ತಿದ್ದೇನೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಅಂತರರಾಜ್ಯದ ಕಾನೂನಿನ ಕೆಳಗಡೆ ಒಂದು ಸಂಸ್ಥೆಯನ್ನು ಹುಟ್ಟುಹಾಕಿ ನಾವು ಸುಮಾರು ಹದಿನೆಂಟು ಇಪ್ಪತ್ತು ವರ್ಷದಿಂದ ಸಹಕಾರಿ ತಳಹದಿಯ ಮೇಲೆ ಒಂದು ಡೈರಿಯನ್ನು ನಡೆಸುತ್ತಿದ್ದೇವೆ. ಅಂತರರಾಜ್ಯ ಕಾನೂನಿನ ಕೆಳಗೆ ಇದನ್ನು ನಡೆಸುತ್ತಿದ್ದೇವೆ.

ಅಧ್ಯಕ್ಷರು:- ಎಷ್ಟು ಹಸುಗಳಿವೆ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಡೈರಿ ಎಂದರೆ ಆ ರೀತಿಯಲ್ಲ. ಈಗ ಕೆ.ಎಂ.ಎಫ್. ಮತ್ತು ಇತರ ಹಾಲಿನ ಯೂನಿಯನ್‌ಗಳಿದೆಯಲ್ಲ. ಅದೇ ರೀತಿ ಮಹಾರಾಷ್ಟ್ರ ಮತ್ತು ಕರ್ನಾಟಕದ ಯೂನಿಯನ್.

ಶ್ರೀ ಸಿ.ಎನ್. ಬಾಲಕೃಷ್ಣ:- ಖಾಸಗಿಯಾಗಿ,

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಖಾಸಗಿಯಲ್ಲ, ಸಹಕಾರಿ ತಳಹದಿಯ ಮೇಲೆ ಸ್ಥಾಪಿಸಿರುವುದು. ಬಹಳ ಮಂದಿ ಅದನ್ನು ಖಾಸಗಿ, ಖಾಸಗಿ ಎಂದೆ ತಿಳಿದುಕೊಂಡಿದ್ದಾರೆ. ರೇವಣ್ಣನವರು ಕೂಡ ಅದರ ಬಗ್ಗೆ ಒಂದು ಸಾರಿ

confuse ಮಾಡಕೊಂಡಿದ್ದರು. ಲಕ್ಷ್ಮಣ ಸವದಿಯವರದ್ದು ಖಾಸಗಿ, ಖಾಸಗಿಯೇಂದೇ ಅವರ ತಲೆಯೊಳಗೆ ಬಂದುಬಿಟ್ಟಿತ್ತು. ಆದರೆ ನಮ್ಮ ಸಂಸ್ಥೆಯೇನಿದೆ ಅದನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿರತಕ್ಕಂಥ ಎಂಟು ತಾಲ್ಲೂಕುಗಳಲ್ಲಿ ಒಳಗೊಂಡಿರತಕ್ಕಂಥ ಒಂದು ಅಂತರ್‌ರಾಜ್ಯ ಕಾನೂನಿನ ಕಳೆಗಡೆ ನಡೆಸುತ್ತಿರುವುದು. Multi State Act ಎಂದು ನಾವೇನು ಕರೆಯುತ್ತೇವೆ ಆ ಪ್ರಕಾರ, ಈ ಭಾಗದಲ್ಲಿ ಹೈನುಗಾರಿ ಉದ್ದಿಮೆ ಏನಿದೆ ಇಲ್ಲಿ ಹೆಚ್ಚು ಹಸುವಿನ ಬಗ್ಗೆ ಆಸಕ್ತಿ ಇರತಕ್ಕಂಥದ್ದು. ನಮ್ಮ ಮುಂಬೈ ಭಾಗದಲ್ಲಿರತಕ್ಕಂಥ ಏನು ಹೈನು ಉತ್ಪಾದನೆ ಮಾಡತಕ್ಕಂಥ ಜನರಿದ್ದಾರೆ ಹೆಚ್ಚು ಎಮ್ಮೆಗಳಿಗೆ ಅವಲಂಬಿತರಾಗಿದ್ದಾರೆ. ಹಸುವಿನ ಮತ್ತು ಎಮ್ಮೆಯ ಮಧ್ಯದಲ್ಲಿರತಕ್ಕಂಥ fat ನಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಆಕಳ ಹಾಲಿನಲ್ಲಿ 6% fat ಬಂದರೆ ಎಮ್ಮೆಯಲ್ಲಿ ಕನಿಷ್ಟ 8% fat ಬರುತ್ತದೆ. ಅತಿ ಹೆಚ್ಚೆಂದರೆ 10% ವರೆಗೂ fat ಬರುತ್ತದೆ. ಆದುದರಿಂದ ಆ ಕಡೆ ಬೆಲೆ ನಿಗದಿಯಾವುದು fat ಮೇಲೆ ಅವಲಂಬಿತವಾಗಿರುತ್ತದೆ. ಈ ಕಡೆ ಲೀಟರ್ ಮೇಲೆ NSF ಮೇಲೆ ನೀವು ಬೆಲೆ ನಿಗದಿ ಮಾಡತಕ್ಕಂಥದ್ದು. ಈ ಎರಡೂ ಕೆ.ಎಂ.ಎಫ್. ಈ ಯೂನಿಯನ್‌ಗಳು ಮತ್ತು ಹಾಲು ಉದ್ಯಮದಲ್ಲಿರತಕ್ಕಂಥ ಜನರನ್ನು ರಕ್ಷಣೆ ಮಾಡುವುದಕ್ಕೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಈಗಾಗಲೇ ನನ್ನ ಅನೇಕ ಸ್ನೇಹಿತ ಸದಸ್ಯರುಗಳು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಏನು ಸಲಹೆ ಕೊಟ್ಟಿದ್ದಾರೆಂದರೆ, ಈ ಕಲಬೆರಕೆ ಹಾಲು ಮತ್ತು ಅಂತರ್‌ರಾಜ್ಯದಿಂದ ಬರತಕ್ಕಂಥ ಹಾಲನ್ನು ತಡೆಯಬೇಕೆಂದಿದ್ದಾರೆ. ಅಂತರ್‌ರಾಜ್ಯದಿಂದ ಬರತಕ್ಕಂಥ ಹಾಲನ್ನು ತಡೆಯುವುದಕ್ಕೆ ಅವಕಾಶಗಳಿಲ್ಲ. ಏಕೆಂದರೆ ನಾವೇ ಬೇರೆ ರಾಜ್ಯಗಳಿಗೆ ಹಾಲನ್ನು ಕಳುಹಿಸತಕ್ಕಂಥ ಸಂದರ್ಭದಲ್ಲಿ, ಬೇರೆ ರಾಜ್ಯದವರು ನಮಗೆ ಹಾಲುನ್ನು ಕಳುಹಿಸತಕ್ಕಂಥದ್ದು, ಆದುದರಿಂದ ಸಹಜವಾಗಿ ಅದರ ಬಗ್ಗೆ restriction ಹಾಕುವುದಕ್ಕೆ ಆಗುವುದಿಲ್ಲ. ಈಗ ಈ ಕಲಬೆರಕೆ ಹಾಲು ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಗಿದೆ. ನನ್ನ ತಾಲ್ಲೂಕಿನಲ್ಲಿ ಸುಮಾರು ಎರಡ್ಮೂರು ಕಡೆ ಅಧಿಕಾರಿಗಳು raid ಮಾಡಿ ಅವರ ಮೇಲೆ case ಹಾಕಿ ಅವರನ್ನು ಜೈಲಿಗೆ

ಹಾಕಿರತಕ್ಕಂಥದ್ದು ಇದೆ. ಒಂದು ಕಲಬೆರಕೆ ಹಾಲು, ಇನ್ನೊಂದು artificial ಹಾಲು. ಇವೆರಡೂ ಆಗುತ್ತಿದೆ.

ಅಧ್ಯಕ್ಷರು:– ಯಾವುದು?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– Artificial ಹಾಲು ಎಂದರೆ ಹಾಲಿನ ತರಹವೇ ಇರುವಂತೆ ಹಾಲನ್ನು ಮಾಡುವುದು. ಅಂದರೆ ಕೃತಕ ಹಾಲು. ಕಲಬೆರಕೆ ಹಾಲೆಂದರೆ ಹಾಲಿಗೆ ಬೇರೆ ಕೆಮಿಕಲ್‌ಗಳನ್ನು ಹಾಕಿ, ಸಕ್ಕರೆಯನ್ನು ಹಾಕಿ, ಗೆಣಸಿನ ಪುಡಿ ಹಾಕಿ, ಮೈದಾಹಿಟ್ಟು ಹಾಕಿ mix ಮಾಡಿ ಹಾಲನ್ನು ಹೆಚ್ಚು ಮಾಡತಕ್ಕಂಥದ್ದು. ಇನ್ನೊಂದು artificial ಹಾಲೆಂದರೆ ಇದರಲ್ಲಿ ಮೂಲ ಹಾಲಿನ ಅಂಶವೇ ಇರುವುದಿಲ್ಲ. ಹಾಲಿನ ತರಹ ಅದು ಕಾಣುತ್ತದೆ. ಯೂರಿಯ, ಕೆಮಿಕಲ್‌ಗಳನ್ನು ಹಾಕಿ ಸೃಷ್ಟಿ ಮಾಡಿ ಹಾಲಿನ ತರಹ ಮಾಡಿಕೊಂಡು ಅದನ್ನು ಉತ್ಪಾದನೆ ಮಾಡತಕ್ಕಂಥದ್ದು ಕೂಡ ಕೆಲವು ಕಡೆ ನಡೆಯತಕ್ಕಂಥದ್ದು, ನಮ್ಮ ತಾಲ್ಲೂಕಿನಲ್ಲಿ ಮಹಾರಾಷ್ಟ್ರದ ಗಡಿ ಭಾಗದಲ್ಲಿರತಕ್ಕಂಥ ಕೆಲವು ಜನರು ಈ ಗೌಳಿ ಉದ್ಯೋಗವನ್ನು ಏನು ಮಾಡುತ್ತಾರಲ್ಲ, ಅಂದರೆ ಹಾಲಿನ ಉದ್ಯೋಗ ಮಾಡತಕ್ಕಂಥವರು ಹಳ್ಳಿ ಹಳ್ಳಿಯಲ್ಲಿ ಏನಿದ್ದಾರಲ್ಲ, ಮನೆ ಮನೆಗಳಿಗೆ ಹೋಗಿ ಹಾಲನ್ನು ಸಂಗ್ರಹ ಮಾಡಿಕೊಂಡು ಅದನ್ನು ಡೈರಿಗೆ ತಂದು ಹಾಕತಕ್ಕಂಥ ಈ ಜನ ಅದನ್ನು ಕೃತಕ ಹಾಲನ್ನು ಮಾಡತಕ್ಕಂಥದ್ದು ಮತ್ತು ಕಲಬೆರಕೆ ಹಾಲನ್ನು ಮಾಡತಕ್ಕಂಥದ್ದು ಆ ಭಾಗದಲ್ಲಿ ಏನು ನಡೆಯುತ್ತಿದೆ ಅದನ್ನು ತಡೆಯುವ ಕೆಲಸವಾಗಬೇಕು. ಅದರ ಜೊತೆಗೆ ಮಾನ್ಯ ಪಶುಸಂಗೋಪನಾ ಸಚಿವರಿಗೆ ನನ್ನ ವಿನಂತಿ ಏನೆಂದರೆ, ಮಾನ್ಯ ರೇವಣ್ಣನವರು ಮಾತನಾಡುವಂತಹ ಸಂದರ್ಭದಲ್ಲಿ ಹಾಲನ್ನು conversion ಮಾಡುವುದಕ್ಕೆ ನಮಗೆ 8 ರಿಂದ 10 ರೂಪಾಯಿ ಖರ್ಚು ಬರುತ್ತದೆ, ಅದರಿಂದ ನಮಗೆ ಲಾಸ್ ಆಗುತ್ತದೆಂದು ಹೇಳಿದರು. ನೀವು ಶಾಲೆಗಳಿಗೆ ಕ್ಷೀರ ಭಾಗ್ಯ ಯೋಜನೆಯನ್ನು ಕೊಡುತ್ತಿದ್ದು, ಅದನ್ನು ಪೌಡರ್ ಮುಖಾಂತರ ಏನು ಕೊಡುತ್ತಿದ್ದೀರಿ, ಸಾಧ್ಯವಾದರೆ ಅವರಿಗೆ ಪ್ರತಿನಿತ್ಯ ಫ್ರೆಶ್ ಹಾಲನ್ನು ಕೊಡುವುದನ್ನು ಮಾಡಿದರೆ ಆ ಎಂಟು ರೂಪಾಯಿ ಕನ್‌ವರ್ಷನ್ ಚಾರ್ಜ್ ತಡೆಯುವುದಕ್ಕೆ ಸಾಧ್ಯವಾಗುತ್ತದೆ.

ನೇರವಾಗಿ ಶಾಲೆಗಳಿಗೆ ಅವತ್ತಿನ ಶುದ್ಧ ಹಾಲನ್ನು ಆಯಾಯ ಹಳ್ಳಿಯಲ್ಲಿರುವಂತಹ collection centre ಗಳು ಎನಿವೆ ಅವರ ಮುಖಾಂತರ ನೀವು ಶಾಲೆಗಳಿಗೆ ಕಳುಹಿಸುವುದಾದರೆ conversion charge ಉಳಿಯುತ್ತದೆ ಹಾಗೂ ಶುದ್ಧವಾದ ಹಾಲು ಮಕ್ಕಳಿಗೆ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದೆ ಸಾಗಾಣಿಕೆ ವೆಚ್ಚ ಕೂಡ ಉಳಿಯುತ್ತದೆ. ಅದರ ಜೊತೆಗೆ ಇನ್ನೊಂದು ಸಂಗತಿ ನಾನು ಮಾನ್ಯ ಸಚಿವರಿಗೆ ಕೇಳಿಕೊಳ್ಳುವುದೇನೆಂದರೆ ವಾರದಲ್ಲಿ ನೀವು ಹಾಲನ್ನು ಕೊಡುತ್ತಿರುವ ದಿನಗಳನ್ನು ಹೆಚ್ಚು ಮಾಡಿ. ಏಕೆಂದರೆ ಈ ಲಾಸ್ ಅನ್ನು ತಡೆಯಬೇಕಾದರೆ, ಈಗಾಗಲೇ ನಮ್ಮ ಪ್ರೊಡಕ್ಷನ್ ಜಾಸ್ತಿಯಾಗಿ ಬಿಟ್ಟಿದೆ, ಅದು consume ಆಗುತ್ತಿಲ್ಲ. ಅದರಿಂದಲೇ ಇವತ್ತು conversion ಮಾಡಬೇಕಾಗುತ್ತದೆ. ಶಾಲಾ ಮಕ್ಕಳಿಗೆ ಐದು ದಿನ ಹಾಲು ಕೊಡುವುದೇನಿದೆ ಅದನ್ನು ಆರು ದಿನಗಳು ಕೊಡಬೇಕೆಂದು ಹಾಗೂ ಫ್ರೆಶ್ ಹಾಲು ಕೊಡಬೇಕೆಂದು ಮಾಡಿ. ಅದರ ಜೊತೆಗೆ ಮಾನ್ಯ ರೇವಣ್ಣನವರು ಹೇಳಿರುವ ವಿಚಾರ ಬಹಳ ಸೂಕ್ತ ಇದೆ. ಇಂತಹ ಕಷ್ಟ ಕಾಲದಲ್ಲಿ ನೀವು ಬಡ್ಡಿರಹಿತ ಸಾಲಗಳನ್ನು ಯೂನಿಯನ್‌ಗಳಿಗೆ ಕೊಟ್ಟಿದ್ದಾದರೆ ಆ ಯೂನಿಯನ್‌ಗಳು ಬದುಕುತ್ತವೆ, ಅದರ ಜೊತೆಗೆ ಈ ಹೈನುಗಾರಿಕೆ ಉದ್ಯಮವನ್ನು ಅವಲಂಬಿತವಾಗಿರುವಂತಹ ಜನರಿಗೂ ಸಹಾಯವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಾನು ಜಾಸ್ತಿ ಮಾತು ಹೇಳುವುದಿಲ್ಲ. ಈ ವಿಷಯ ಬಹಳ ಪ್ರಸ್ತುತವಾಗಿ ಚರ್ಚೆಗೆ ಬಂದಿದೆ. ನನ್ನದು ಒಂದೇ ಒಂದು ವಿನಂತಿ ಏನೆಂದರೆ ರೈತರು ಇಷ್ಟು ದೊಡ್ಡ ಪ್ರಮಾಣದಲ್ಲಿ ಉದ್ಯಮವನ್ನು ಜೀವನಾಧಾರವಾಗಿ ತೆಗೆದುಕೊಂಡಿರುವಂತಹ ಸಂದರ್ಭದಲ್ಲಿ ಸರ್ಕಾರ ಸ್ವಲ್ಪ ಉದಾರವಾಗಿ ಈ ಕ್ಷೇತ್ರವನ್ನು ನೋಡುವ ಅಗತ್ಯತೆ ಇದೆ. ಸಾಮಾಜಿಕ ಕ್ಷೇತ್ರದಲ್ಲಿ ಅವರಿಗೆ ಅನುಕೂಲ ಮಾಡಿ ಅವರ ಒಂದು ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಒಳ್ಳೆಯದಾಗುವುದಕ್ಕೆ ನಾವು ಅನೇಕ ಯೋಜನೆಗಳನ್ನು ಮಾಡುತ್ತೇವೆ. ಇದು ಆ ಯೋಜನೆಯ ಭಾಗ ಎಂದು ನಾಲ್ಕು ರೂಪಾಯಿ ಕೊಡುತ್ತಿದ್ದೇವೆ. ಈ ರೀತಿ incentives

ಅನ್ನು ಬೇರೆ ಬೇರೆ ರೀತಿಯಲ್ಲಿ ಕೊಡುವುದಕ್ಕೆ ಮುಂದಾಗಬೇಕಾಗಿರುವುದು ಅಗತ್ಯತೆ ಇದೆ. ರೈತರ ಜೀವನದಲ್ಲಿ ಇದು ಆರ್ಥಿಕವಾಗಿ ಶಕ್ತಿ ಹಾಗೂ ಸಾಮಾಜಿಕವಾಗಿ ಸ್ಥಾನಮಾನ ದೊರಕಿಸಿಕೊಡುವಂಥಾದ್ದು ಇದೆ. ಆ ಹಿನ್ನೆಲೆಯಲ್ಲಿ ನನ್ನ ಸಲಹೆ ಎನೆಂದರೆ ನಮ್ಮ ಎಲ್ಲಾ ಒಕ್ಕೂಟಗಳು ಇವೆಯಲ್ಲ, ಆ ಒಕ್ಕೂಟಗಳಲ್ಲಿ ಇವತ್ತಿನ ಸ್ಪರ್ಧಾತ್ಮಕ ದಿನಕ್ಕೆ ಅವರು ಸಿದ್ಧವಾಗುವಂತಹ ಒಂದು ವ್ಯವಸ್ಥೆಯನ್ನು ನಾನು ಕಲ್ಪಿಸದೇ ಹೋದರೆ, ನಾವು ಹಳೇ ಪದ್ಧತಿಯನ್ನು ಇಟ್ಟುಕೊಂಡು ಎಲ್ಲವನ್ನೂ ಮಾಡುವುದಕ್ಕೆ ಹೋದರೆ ಆಗುವುದಿಲ್ಲ. ನಾವು ಧಾರವಾಡ ಹಾಲು ಒಕ್ಕೂಟದವರು. ನಮ್ಮ ಜಿಲ್ಲೆಯಲ್ಲಿ 42,000 ಲೀಟರ್ ಹಾಲು ಸಂಗ್ರಹವಾಗುತ್ತಿದೆ. ನಾವು ಎಲ್ಲಾ ಹಾಲನ್ನು ಧಾರವಾಡಕ್ಕೆ ಕಳುಹಿಸಬೇಕು. 45,000 ಲೀಟರ್ ಹಾಲು ನಮ್ಮ ಜಿಲ್ಲೆಯಲ್ಲಿ ಖರ್ಚಾಗುತ್ತದೆ. ಆದರೆ ಅದನ್ನು ಧಾರವಾಡಕ್ಕೆ ಕಳುಹಿಸಿ, ಅಲ್ಲಿ ಪ್ಯಾಕ್ ಮಾಡಿಸಿ, ಮತ್ತೆ ನಾವು ನಮ್ಮ ಜಿಲ್ಲೆಗೆ ತೆಗೆದುಕೊಂಡು ಬಂದು ಮಾರುವುದು. ಒಂದು packing unit ಗೆ 6–8 ಕೋಟಿ ರೂಪಾಯಿಯಿಂದ maximum ಎಂದರೆ 10 ಕೋಟಿ ರೂಪಾಯಿ ಸಾಕು. ಹತ್ತು ಕೋಟಿ ರೂಪಾಯಿಗಿಂತ ಜಾಸ್ತಿಯಾಗುವುದಿಲ್ಲ. ನಾನು ಎಲ್ಲಾ ನೋಡಿಯೇ ಹೇಳಿದ್ದೇನೆ. ಒಂದು packing unit ಮಾಡಿದರೆ transportation charge ಎಲ್ಲಾ ಉಳಿಯುತ್ತದೆ ಮತ್ತು ಗುಣಮಟ್ಟದ ಹಾಲನ್ನು ಗ್ರಾಹಕರಿಗೆ ಕೊಡುವುದಕ್ಕೆ ಆಗುತ್ತದೆ. ಹಾಗಾಗಿ ಈ ರೀತಿ ಆಧುನಿಕವಾಗಿ ಯೋಚಿಸಿ ವೆಚ್ಚವನ್ನು ಕಡಿಮೆ ಮಾಡಿ ಗ್ರಾಹಕರಿಗೆ ಉತ್ತಮವಾದಂಥ ಹಾಲನ್ನು ತಲುಪಿಸುವುದಕ್ಕೆ ಬೇಕಾದಂತಹ ಪ್ರಯತ್ನವನ್ನು ಮಾಡಬೇಕು.

ಅಧ್ಯಕ್ಷರು:– ಅಲ್ಲಿ ಒಂದು ಘಟಕ ಹಾಕಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರೆ ಸೆಂಟರ್ ಇರುತ್ತದೆ. ಕೆಲವು ಕಡೆ chilling centre, ಇನ್ನು ಕೆಲವು ಕಡೆ packing centre ಬೇಕಾಗುತ್ತದೆ. ಶಿರಸಿಯಲ್ಲಿ chilling centre ಇದೆ. ಆದರೆ packing ಗೆ ದಿನಾ ಒಂದು ಟ್ರಕ್ ಧಾರವಾಡಕ್ಕೆ ಹೋಗುತ್ತದೆ, ಮತ್ತೆ next

day pack ಆಗಿ ಇಲ್ಲಿ ಬರುತ್ತದೆ. ಅದಕ್ಕೆ ಸಾರಿಗೆಗೆ ನಿಮಗೆ ಜಾಸ್ತಿ ಎರಡು ರೂಪಾಯಿ ಖರ್ಚಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:- ಈಗಾಗಲೇ ಸಮಯ ಏಳೂವರೆ ಆಯಿತು, ಈಗ ಹಾಲಿನ ಬಗ್ಗೆ ಮಾತನಾಡುವುದು ಎಷ್ಟು ಸೂಕ್ತ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾವು ಮಾತನಾಡುತ್ತಿರುವ ಹಾಲಿನ ವಿಷಯವಲ್ಲ ಅವರು ಹೇಳುತ್ತಿರುವುದು, ಅದು ಬೇರೆ ಹಾಲಿನ ವಿಷಯ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಬಸವಣ್ಣನವವರೆ ನಿಮಗೆ ಏನಾದರೂ ಅದು ಚಿಂತೆ ಆಗಿದೆಯೇ? ಅದನ್ನು ಚಿಂತೆ ಮಾಡುವವರೆಲ್ಲ ಹೊರಟು ಹೋಗಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಹದೇವಪ್ರಸಾದ್ ರವರೆ, ಏಳೂವರೆ ಆದಮೇಲೆ ನಾವು, ನೀವು ಏನು ಮಾಡುತ್ತೇವೆನ್ನುವುದು ಗೊತ್ತಿದೆ. ನಿಮ್ಮ ಜೊತೆಗೆ ಎಷ್ಟೋ ಸಾರಿ . . .

ಶ್ರೀ ಹೆಚ್.ಡಿ. ರೇವಣ್ಣ:- ಮಹದೇವಪ್ರಸಾದ್‌ರವರಿಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಎಲ್ಲಾ ಒಕ್ಕೂಟಗಳಿಗೆ ಅಲ್ಲಿ ನೀವು ಯಾರನ್ನು ಅಧಿಕಾರಿಗಳನ್ನು ನೇಮಿಸುತ್ತೀರಿ? ಅವರಿಗೆ ನೀವು ನಿಮ್ಮನ್ನು ಎರಡು-ಮೂರು ವರ್ಷ disturb ಮಾಡುವುದಿಲ್ಲ, ನೀವು ಇಂತಾದ್ದನ್ನು ಮಾಡಿ ತೋರಿಸಿ ಎಂದು ಒಂದು ಟಾರ್ಗೆಟ್ ಕೊಟ್ಟು ಕಳುಹಿಸಿ. ನೀವು ಮನಸೋಯಿಚ್ಛೆ ವರ್ಷಕ್ಕೆ ಒಂದು ಸಲ ಅಥವಾ ಮೂರು ಸಲ ಟ್ರಾನ್ಸ್‌ಫರ್ ಮಾಡುವುದಿದ್ದರೆ ಯಾವ ಅಧಿಕಾರಿಗಳು ತನ್ನದು ಎನ್ನುವ ಭಾವನೆಯಿಂದ ಕೆಲಸ ಮಾಡುತ್ತಾರೆ? ಅವರಿಗೆ ಮೂರು ವರ್ಷದಲ್ಲಿ ನಿನ್ನ ಟಾರ್ಗೆಟ್ ಇದು ಎಂದು ಕೊಡಬೇಕು, professionalism ಅನ್ನು ನಾವು ಸರ್ಕಾರದಲ್ಲಿ ತೋರಿಸಿಲ್ಲವೆಂದರೆ ಎಲ್ಲಿಯೂ ನಾವು ಯಶಸ್ವಿಯಾಗುವುದಕ್ಕೆ ಸಾಧ್ಯವೇ ಇಲ್ಲ.

ಬೋರ್ಡ್‌ಗಳು ಹಾಳಾಗಿ ಹೋಗಿವೆಯಲ್ಲ, ಅದೇ ರೀತಿ ಈ ಒಕ್ಕೂಟಗಳು ಹಾಳಾಗಿ ಹೋಗುತ್ತವೆ.

ಅಧ್ಯಕ್ಷರು:- ಧೈರಿಯವರೇ ಅವರಿಗೆ ಬೇಕಾದಂತಹ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬಹುದು. ಸರ್ಕಾರದಿಂದ ಏಕೆ ಕೇಳಬೇಕು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅವರೇ ಮಾಡಿಕೊಳ್ಳುವುದಕ್ಕೆ ಹೋಗಿ excess ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಆಗಿರುವಂತಹ ತಾಪತ್ರಯಗಳು ಬೇರೆಯೇ ಇದೆ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ್:- ಒಬ್ಬರ ಜಾಗದಲ್ಲಿ ಐದು ಜನ ನೇಮಕ ಮಾಡಿಕೊಳ್ಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈ ರೀತಿಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸರಿಯಾದಂಥ ಒಬ್ಬ competitive ಅಧಿಕಾರಿಯನ್ನು ಸಹ ಜವಾಬ್ದಾರನ್ನಾಗಿ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ರೇವಣ್ಣನವರೆ, ಏನು ಹೇಳಿ. ಈಗಾಗಲೇ ಮಾತನಾಡಿದ್ದೀರಲ್ಲ. ಇದಕ್ಕೆ ಸಚಿವರು ಉತ್ತರ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ:- ಅವರು ನೇರವಾಗಿ ಆರೋಪ ಮಾಡುತ್ತಾರೆ, ನೀವು ಸುಮ್ಮನಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವುದನ್ನು ನೋಡಿದರೆ, ಇದರಲ್ಲಿ ನೀವು ಏನಾದರೂ ಪರಿಹಾರ ಕೊಡುತ್ತೇವೆನ್ನುವುದು ಇದೆಯೇ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಇದಕ್ಕೆ ಉತ್ತರ ಬಂದು ಬಿಟ್ಟಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ:- ಉತ್ತರ ಪ್ರಿಂಟ್ ಆಗಿ ಬಂದುಬಿಟ್ಟಿದೆ. ಮಾನ್ಯ ಅಧ್ಯಕ್ಷರ, ಎರಡು ನಿಮಿಷ, ಇದು ರೈತರ ವಿಚಾರ. ದಯಿಮಾಡಿ, ಮಾನ್ಯ ಜಯಚಂದ್ರರವರೆ, ಎರಡು ನಿಮಿಷ ತಾವು ಯೀಲ್ಡ್ ಆಗಬೇಕು.

ಅಧ್ಯಕ್ಷರು:- ಈ ರೀತಿ ಹೆದರಿಸುವುದು ಏನಿದು, ಇದು ಚರ್ಚೆಯೇ?

ಶ್ರೀ ಹೆಚ್.ಡಿ. ರೇವಣ್ಣ:- ನಾನು ಹೇಳುತ್ತೇನೆ, ನಿಮಗೆ ದಾಖಲೆ ಕೊಡುತ್ತೇನೆ.

ಅಧ್ಯಕ್ಷರು:- ರೇವಣ್ಣನವರೆ, ಇಲ್ಲಿ ಕೇಳಿ.

ಶ್ರೀ ಟಿ.ಬಿ. ಜಯಚಂದ್ರ:- ಪ್ರಿಂಟ್ ಆಗುತ್ತದೆ ಎನ್ನುವುದನ್ನು ಈ ರೀತಿಯಾಗಿ ಹೇಳಿದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ಮಾತನಾಡುತ್ತೇನೆ. ನೀವು ಮಾತನಾಡುವುದು ಬೇಡವೆಂದರೆ ಮಾತನಾಡುವುದಿಲ್ಲ. ಒಂದೆರಡು ನಿಮಿಷ ತಾಳ್ಮೆಯಿಂದ ಇರಬೇಕು.

ಶ್ರೀ ಟಿ.ಬಿ. ಜಯಚಂದ್ರ:- ಸರ್ಕಾರದ ವ್ಯವಸ್ಥೆಯ ಬಗ್ಗೆ ಇಷ್ಟೊಂದು ಲಘುವಾಗಿ ಮಾತನಾಡುವುದಲ್ಲ.

ಶ್ರೀ ಹೆಚ್.ಡಿ. ರೇವಣ್ಣ:- ನಾನು ಹೇಳುವವರೆಗೂ ಒಂದೆರಡು ನಿಮಿಷ ತಾಳ್ಮೆಯಿಂದ ಇರಿ.

ಶ್ರೀ ಟಿ.ಬಿ. ಜಯಚಂದ್ರ:- ನೀವು ಹಾಲಿನ ಬಗ್ಗೆ ಹೇಳಿ, ನಾನು ಕೇಳುತ್ತೇನೆ. ಪ್ರಿಂಟ್ ಆಗಿ ಬಂದಿದೆ, ಇನ್ನೊಂದು ಆಗಿ ಬಂದಿದೆ ಎಂದು ಹೇಳಿದರೆ ನಾನು ಏನು ಹೇಳಬೇಕು ಹೇಳಿ?

ಶ್ರೀ ಹೆಚ್.ಡಿ. ರೇವಣ್ಣ:- ನಾನು ಅದರ ಬಗ್ಗೆ ಹೇಳುತ್ತಿಲ್ಲ. ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ದಿನಾಂಕ 04.06.2015 ರಲ್ಲಿ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕರು ಒಂದು ಪತ್ರ ಬರೆದಿದ್ದಾರೆ. ಹರ್ಷಗುಪ್ತ ಅವರಿಗೆ ಏನಂತ ಪತ್ರ ಬರೆದಿದ್ದಾರೆ ಎಂದರೆ, ನಿಮ್ಮ ಕಾರ್ಯದರ್ಶಿಯವರು ಏನಾದರೂ ನೋಡಿದ್ದಾರಾ? ಆ ಪತ್ರದಲ್ಲಿ ಏನಿದೆ ಎಂದು ತಾವೇ ಓದಿ. ಈ ರೀತಿ ಡೈರಿಗಳು ಎಲ್ಲಾ ಮುಳುಗಿ ಹೋಗುತ್ತಿವೆ, subsidize ಕೊಡಬೇಕೆಂದು ಬಂದಿದೆ. ಇದರ ಬಗ್ಗೆ ತಾವು ಏನೂ ಹೇಳಿಲ್ಲ. ಇಲ್ಲಿ ಈಗ ಮಾನ್ಯ ಜಗದೀಶ್ ಶೆಟ್ಟರ್ ಇಲ್ಲ. ಅವರು

ಇದ್ದಾಗ ಒಂದು ಆದೇಶ ಮಾಡಿದ್ದಾರೆ. ಆಗ ಇದೇ ರೀತಿ ರಾಜ್ಯದಲ್ಲಿ ಪರಿಸ್ಥಿತಿ ಇತ್ತು. 25,000 ಟನ್ ಪೌಡರ್ conversion ಆಗಿ ಮಾರಾಟ ಇಲ್ಲದೇ ಬಿದ್ದುಹೋಯಿತು. ಆಗ 50% ಸಬ್ಸಿಡಿ ಕೊಟ್ಟು, ಬ್ಯಾಂಕ್‌ನಲ್ಲಿ ಬಡ್ಡಿ ಸಹಿತ ಸಾಲ ಕೊಡಿಸಿ, ರೈತರನ್ನು ಉಳಿಸಿದ್ದಾರೆ, ಅದರ ಬಗ್ಗೆ ಉತ್ತರದಲ್ಲಿ ತಾವು ಹೇಳಿಲ್ಲ.

ಅಧ್ಯಕ್ಷರು:– ಅದನ್ನು ಹೇಳಿದಿರಲ್ಲ.

ಶ್ರೀ ಹೆಚ್.ಡಿ. ರೇವಣ್ಣ:– ದಯಮಾಡಿ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡುತ್ತೇನೆ. ನಿಮ್ಮಲ್ಲಿ ಒಕ್ಕೂಟ ಇದೆಯಲ್ಲ, ಅಲ್ಲಿ 3,000 ಟನ್ ಇದೆ. ಅಲ್ಲಿ ರೈತರಿಗೆ 18 ರೂಪಾಯಿ ಕೊಡುತ್ತಿರುವುದು ಇದ್ದು, ರಾಜ್ಯದಲ್ಲಿ lowest price ನಿಮ್ಮ ಒಕ್ಕೂಟದಲ್ಲಿ ಕೊಡುತ್ತಿರುವುದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಇಷ್ಟೊತ್ತು ಬಹಳ ಜನ ಸದಸ್ಯರು ಹಾಲಿನ ಬಗ್ಗೆ ಪ್ರಸ್ತಾಪ ಮಾಡಿದರು. ರೈತರ ಸಮಸ್ಯೆಗಳು ಏನು, ಅದಕ್ಕೆ ಸರ್ಕಾರ ಯಾವ ರೀತಿಯಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅವರೆಲ್ಲರ ಸಲಹೆಗಳನ್ನು ಸ್ವಾಗತಿಸುತ್ತೇನೆ. ಅವರು ಗ್ರಾಮೀಣ ಪ್ರದೇಶದ ಅನುಭವದ ಹಿನ್ನೆಲೆಯಲ್ಲಿ ಇವೆಲ್ಲ ಸಲಹೆಗಳನ್ನು ಕೊಟ್ಟಿದ್ದಾರೆ ಅದು ವಾಸ್ತವಿಕವಾಗಿ ಇದೆ. ಮಾನ್ಯ ಶಿವಲಿಂಗೇಗೌಡರು ಹೇಳುವಾಗ ನಮ್ಮ ಇಲಾಖೆಯಿಂದ ನಾವು ನಾಲ್ಕು ರೂಪಾಯಿ ಪ್ರೋತ್ಸಾಹ ಧನ ಎಂದು ಏನು ಕೊಡುತ್ತಿದ್ದೇವೆ, ನಾಲ್ಕು quarterly installment ಪ್ರಕಾರ ಹಣವನ್ನು ನಾವು ಮುಂಗಡವಾಗಿ ಕೊಡುತ್ತೇವೆ. ಅಂದರೆ ತತ್‌ಕ್ಷಣ ಹಣವನ್ನು ಕೊಡುತ್ತೇವೆ. ನಾವು ಮಾರ್ಚ್‌ವರೆಗೂ ಹಣವನ್ನು ಕೊಟ್ಟಿದ್ದೇವೆ. ಈಗ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನದು ಬಿಡುಗಡೆಯಾಗಬೇಕು, ಎಲ್ಲಾ ಹಣವನ್ನು ಕೊಟ್ಟದ್ದೀವ.

ಅಧ್ಯಕ್ಷರು:– ನೀವು ಕೊಟ್ಟ ಹಣ ರೈತರಿಗೆ ತಲುಪುತ್ತಿದೆಯೇ?

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಹಣ ತಲುಪುತ್ತಿದೆ. ಏನಾಗುತ್ತಿದೆ ಎಂದರೆ ನಮ್ಮ ವ್ಯವಸ್ಥೆಯಲ್ಲಿ ಸರ್ಕಾರದಿಂದ ಹಣ ಬಿಡುಗಡೆಯಾಗಿ ಟ್ರೆಷರಿಯಲ್ಲಿ upload ಆಗಿ, ಯೂನಿಯನ್‌ಗಳಿಗೆ ಹೋಗಿ ಅಲ್ಲಿ ಹೋಗಬೇಕಾದರೆ ಸ್ವಲ್ಪ ತಡವಾಗುತ್ತದೆ. ಆ ಕಾರಣಕ್ಕೋಸ್ಕರ ನೇರವಾಗಿ online payment ಮಾಡಬೇಕೆಂದು ಚಿಂತನೆ ಮಾಡಿ, ಎಲ್ಲಾ ಅಕೌಂಟ್ಸ್ ಅನ್ನು ಕೂಡ ಈಗ ತೆಗೆದುಕೊಂಡಿದ್ದೇವೆ. ನಾವು ನೇರವಾಗಿ ಯೂನಿಯನ್‌ಗಳಿಗೆ ಹಣವನ್ನು ಬಿಡುಗಡೆ ಮಾಡಿ ಅದರ ಮುಖೇನ ಆನ್‌ಲೈನ್ ಪೇಮೆಂಟ್ ಮಾಡಬೇಕು, ಸರ್ಕಾರದಿಂದ ಬಿಡುಗಡೆಯಾದ ಹಣ ಕೊನೇ ಪಕ್ಷ ಒಂದು ತಿಂಗಳೊಳಗೆ ಅವರಿಗೆ ತಲುಪುವಂತಹ ವ್ಯವಸ್ಥೆಯಾಗಬೇಕೆನ್ನುವ ಕಾರ್ಯಕ್ರಮವನ್ನು ರೂಪಿಸಿದ್ದೇವೆ, ಅದನ್ನು ಮಾಡುತ್ತೇವೆ. ನಾವು upto ಜೂನ್‌ವರೆಗೂ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಏಪ್ರಿಲ್-ಮೇ ತಿಂಗಳಿನದು ಬಿಡುಗಡೆ ಮಾಡಬೇಕು. ಅದರಲ್ಲಿ ಏನಾಗುತ್ತದೆಂದೆ, ನಾವು ಹಣವನ್ನು ಬಿಡುಗಡೆ ಮಾಡಬೇಕಾದರರೆ bills raise ಮಾಡಬೇಕಲ್ಲಾ, ಬಹಳಷ್ಟು ಡೈರಿಗಳಿಂದ ಬಿಲ್‌ಗಳೇ ಬರುವುದಿಲ್ಲ. ಇವರಿಂದ ಬಿಲ್‌ಗಳು ಬರದೇ ಇರುವುದರಿಂದ ತಾಂತ್ರಿಕವಾಗಿ ತೊಂದರೆಯಾಗುತ್ತಿದೆ. ಆದರೆ ಸರ್ಕಾರದಿಂದ ಯಾವುದೇ ರೀತಿಯಲ್ಲೂ ಹಣ ಬಿಡುಗಡೆ ಮಾಡುವ ವಿಷಯದಲ್ಲಿ ತೊಂದರೆಯಗುತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- Bill raise ಮಾಡದೇ ಇದ್ದರೆ ನಿಮಗೆ ಅನುಕೂಲವೇ ಆಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:- ಇಲ್ಲಿ ಅನುಕೂಲದ ಪ್ರಶ್ನೆಯಲ್ಲ, ಇಲ್ಲಿ ಏನಾಗಿದೆಯೆಂದರೆ, ಖಾಸಗಿಯವರ ಕೈಯಲ್ಲಿ ಯೂನಿಯನ್ ಇರುವಂಥದ್ದು. ಅವರು ವ್ಯವಸ್ಥಿತವಾಗಿ ಅದನ್ನು process ಮಾಡಿ ಕಳುಹಿಸಬೇಕಾಗುತ್ತದೆ. ಅದನ್ನು in time ನಲ್ಲಿ ಕಳುಹಿಸದೇ ಇರುವುದರಿಂದ ತೊಂದರೆಯಾಗುತ್ತಿದೆ. ಅದು ಏನೂ ದೊಡ್ಡ ತೊಂದರೆಯಾಗಿಲ್ಲ. ಹಣವಂತೂ ಕಾಲ ಕಾಲಕ್ಕೆ ಬಿಡುಗಡೆಯಾಗುತ್ತಿದೆ. ಈಗ ಇಲ್ಲಿ ಕಳಪೆ ಮಟ್ಟದ ಹಾಲು ಬರುತ್ತಿದೆಯೆಂಬ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ನಾನು ಕಲಬೆರಕೆ

ಹಾಲು ಬರುತ್ತಿರುವಂಥದ್ದನ್ನು ಕಳೆದ ಎರಡು ವರ್ಷಗಳಲ್ಲಿ ಸಾಕಷ್ಟು ನೋಟಿಸ್ ಮಾಡಿದ್ದೇವೆ. ನಮ್ಮ ಹತ್ತಿರ ಖಾಸಗಿ ಡೈರಿಯವರು ಏನು ಮಾಡಿದರೆಂದರೆ, ನಮಗೆ ಕೊಟ್ಟಂತಹ ಪ್ರೋತ್ಸಾಹ ಧನವನ್ನು ಖಾಸಗಿ ಡೈರಿಯವರಿಗೂ ಕೊಡಬೇಕೆಂದು ಒತ್ತಾಯವನ್ನು ಇಟ್ಟರು, ಅದಕ್ಕೆ ನಾವು ಒಪ್ಪಲಿಲ್ಲ. ಹಾಗಾಗಿ ಹೆಚ್ಚು-ಕಡಿಮೆ ಖಾಸಗಿ ಡೈರಿಗಳೆಲ್ಲಾ ಮುಚ್ಚಿ ಹೋಗುವ ಪರಿಸ್ಥಿತಿ ಬಂದಿದೆ. ಹಾಗಾಗಿ adulteration ನಡೆಯುತ್ತಿದೆಯೆಂದು ಗೊತ್ತಾದ ಮೇಲೆ, ಇದಕ್ಕೆ ನಾವು ಏನು ಮಾಡಿದ್ದೇವೆಂದರೆ, ಯೂನಿಯನ್ ವ್ಯಾಪ್ತಿಯಲ್ಲಿ ಒಂದೊಂದು ವ್ಯಾನ್‌ಗಳನ್ನು ಬಿಟ್ಟು ಎಲ್ಲೆಲ್ಲಿ ಖಾಸಗಿಯವರು ಹಾಲನ್ನು ಮಾರಾಟ ಮಾಡುತ್ತಿದ್ದಾರೆ, ಅದನ್ನು frequent check ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ:- ಹಾಸನದಲ್ಲಿ ನಡೆಯುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ:- ಹಾಸನ ನಿಮ್ಮ ಸಾರ್ವಭೌಮತ್ವದಲ್ಲೇ ಇರುವುದು.

ಶ್ರೀ ಹೆಚ್.ಡಿ. ರೇವಣ್ಣ:- ಬೆಂಗಳೂರಿನಲ್ಲಿ ಇವತ್ತು ಪ್ರತಿ ಇತ್ಯ 15 ಲಕ್ಷ ಲೀಟರ್ ಹಾಲು ತಮಿಳುನಾಡಿನಿಂದ ಬರುತ್ತಿದೆ, ದಯಮಾಡಿ ಅದನ್ನು ನೋಡಿ. ಬೆಳಗಾವಿಯಲ್ಲಿ ಎಷ್ಟಿದೆ ಎಂಬುದನ್ನು ಕೇಳಿ ಪ್ರತಿ ದಿನ 10 ಲಕ್ಷ ಲೀಟರ್ ಹಾಲು ಮಾರಾಟ ಮಾಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ರೇವಣ್ಣನವರೆ, ಕುಳಿತುಕೊಳ್ಳಿ, ತಾವವು ಹೇಳಿರುವುದನ್ನೆಲ್ಲಾ ಕೇಳಿದ್ದೇನೆ. Adulteration ಆಗುತ್ತಿದೆಯೆಂದು ಹೇಳಿದ ಮೇಲೆ ನಾವು ಸಾಕಷ್ಟು ಜನರ ಮೇಲೆ ಕೇಸ್ ಹಾಕುವಂಥ ಕೆಲಸವನ್ನು ಮಾಡಿದ್ದೇವೆ. ಇದನ್ನು ನಾವು ಹೇಳುವಂಥ ಅವಶ್ಯಕತೆ ಇಲ್ಲ, ಆದರೂ ಕೂಡ ಹೇಳಬೇಕಾಗುತ್ತದೆ. ನಮಗೆ ತೊಂದರೆ ಇರುವಂಥದ್ದು, ಈ Adulteration Act Food Department ನಲ್ಲಿ ಬರುವಂಥದ್ದು. Food Safety Inspectors ಎನ್ನುವಂಥದ್ದು Health Department ನಲ್ಲಿರುವಂಥದ್ದು. ಈ Health Department ನಲ್ಲಿ ಸಾಕಷ್ಟು ಅಧಿಕಾರಿಗಳು ಇಲ್ಲದೇ ಇರುವ ಕಾರಣದಿಂದ ತೊಂದರೆಯಾಗುತ್ತಿದೆಯೆಂದು suo-motto ನಾವೇ ಎಲ್ಲವನ್ನೂ

check ಮಾಡಿ ಕೇಸ್‌ಗಳನ್ನು ಹಾಕುವಂಥ ಕೆಲಸವನ್ನು ಮಾಡಿದ್ದೇವೆ. ಇವತ್ತು ಬೆಂಗಳೂರಿನಲ್ಲಿ ನಾವು ಇತ್ತೀಚಿನ ದಿವಸಗಳಲ್ಲಿ ಎರಡು ವ್ಯಾನ್‌ಗಳನ್ನು ಬಿಟ್ಟು ಖಾಸಗಿ ಹಾಲನ್ನು test ಮಾಡುವಂಥದ್ದನ್ನು ಮಾಡಿದ್ದೇವೆ, ಆ ಇತಿಮಿತಿಯಲ್ಲಿ ಏನೆಲ್ಲಾ ಮಾಡುವುದಕ್ಕೆ ಸಾಧ್ಯವಿದೆಯೋ, ಅದನ್ನು ಮಾಡುತ್ತಿದ್ದೇವೆ. Adulteration ವಿಚಾರದ ಬಗ್ಗೆ ಜಾಸ್ತಿ ತೊಂದರೆಯಾಗುತ್ತಿಲ್ಲ, ಈಗ ತೊಂದರೆಯಾಗುತ್ತಿರುವಂಥದ್ದು ಏನೆಂದರೆ, production ಹೆಚ್ಚಿಗೆ ಆಗಿರುವಂಥದ್ದು, ನಾವು ಪ್ರೋತ್ಸಾಹಧನವನ್ನು ಕೊಡುತ್ತಿರುವ ಹಿನ್ನಲೆಯಲ್ಲಿ ಇವತ್ತು 74 ಲಕ್ಷ ಲೀಟರ್ ಇದೆ, ನಮಗೆ ಎಲ್ಲಾ ಯೂನಿಯನ್‌ಗಳಲ್ಲೂ ಕೂಡ ಅದನ್ನು ಇಟ್ಟುಕೊಳ್ಳುವುದಕ್ಕೆ ಜಾಗವಿಲ್ಲದೇ ಇರುವಂಥ ಮಟ್ಟದಲ್ಲಿದೆ. ಇದನ್ನು conversion ಗೆ ಕಳುಹಿಸಬೇಕೆಂದರೆ 1,500 ಕಿ.ಮೀ., 1,600 ಕಿ.ಮೀ. ಗೆ ಕಳುಹಿಸಬೇಕು, ಮತ್ತೆ ಅಲ್ಲಿಂದ ಬರಬೇಕು, ಈ ತೊಂದರೆ ಇದೆ. ನಮ್ಮಲ್ಲಿ ಒಟ್ಟು 74 ಲಕ್ಷ ಲೀಟರ್‌ನಲ್ಲಿ 35 ರಿಂದ 40 ಲಕ್ಷ ಲೀಟರ್ ಹಾಲು ಬಳಕೆಯಾಗುವಂಥದ್ದು. ಅದು ಹಾಲು, ಮೊಸರು ಎಲ್ಲಾ ಸೇರಿ ಇಷ್ಟು ಬಳಕೆಯಾಗುತ್ತಿದೆ. ಪ್ರತಿ ದಿವಸವೂ ಕೂಡ ಕನಿಷ್ಟ ಎಂದರೂ 30 ಲಕ್ಷ ಲೀಟರ್ ಹಾಲನ್ನು ಹೊರಗಡೆ ಕಳುಹಿಸಬೇಕಾದಂಥ ಪರಿಸ್ಥಿತಿ ಇದೆ.

ಅಧ್ಯಕ್ಷರು:– ಹೊರಗೆ ಏಕ್ಕೋಸ್ಕರ ಕಳುಹಿಸುವುದು?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾವು ಅದನ್ನು ಪೌಡರ್ ಮಾಡುವುದಕ್ಕೋಸ್ಕರ ಕಳುಹಿಸುತ್ತೇವೆ.

ಅಧ್ಯಕ್ಷರು:– Conversion ಕಳುಹಿಸಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ:– ಈಗಾಗಲೇ ಪೌಡರ್ ಮಾಡುವಂಥ ಯೂನಿಟ್ ಅನ್ನು ಚಾಮರಾಜ ನಗರದಲ್ಲಿ 200 ಕೋಟಿ ರೂ. ಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಇವತ್ತು ಮೈಸೂರಿನಲ್ಲಿ 200 ಕೋಟಿ ರೂ. ಗಳಲ್ಲಿ ಪ್ರಾರಂಭ ಮಾಡುತ್ತಿದ್ದೇವೆ, ರಾಮನಗರದಲ್ಲಿ ಸುಮಾರು 300 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಪೌಡರ್ ಪ್ಲಾಂಟ್ ಅನ್ನು ಮಾಡುತ್ತಿದ್ದೇವೆ. ಈ ರೀತಿಯಾಗಿ ಎಲ್ಲಾ ಕಡೆಗಳಲ್ಲೂ ಮಾಡುತ್ತೇವೆ. ಇಲ್ಲಿ ಏನಾಗಿದೆಯೆಂದರೆ

ನಮಗೆ 2008 ರಲ್ಲಿ 35 ರಿಂದ 36 ಲಕ್ಷ ಲೀಟರ್‌ಗೆ infrastructure ಏನು ಇತ್ತೋ, ಅಷ್ಟೇ infrastructure ಇರುವಂಥದ್ದು, ನಾವು infrastructure ಗೆ ಹೆಚ್ಚು ಆಸಕ್ತಿ ವಹಿಸಲಿಲ್ಲ. ನಾವು ಪ್ರೋತ್ಸಾಹ ಧನವನ್ನು ಬಿಡುಗಡೆ ಮಾಡಬೇಕಾದಾಗ ಎಲ್ಲಾ ಡೈರಿಯವರಿಗೂ ಹೇಳಿದ್ದೇವೆ, 2 ರೂ. ಗಳನ್ನು ರೈತರಿಗೆ ವರ್ಗಾವಣೆ ಮಾಡಿ, ನೀವು 2 ರೂ. ಗಳನ್ನಾದರೂ save ಮಾಡಿ, ಅದನ್ನು infrastructure ಗೆ ಖರ್ಚು ಮಾಡಿ ಎಂಬ ಮಾತನ್ನು ಹೇಳಿದೆವು. ಆದರೆ ಯಾವ ಯೂನಿಯನ್‌ನವರು ಕೂಡ ಇಟ್ಟಿಲ್ಲ, ಕೆಲವು ಕಡೆಗಳಲ್ಲಿ ಮಾತ್ರ ಇಟ್ಟಿದ್ದಾರೆ, ಬಹಳಷ್ಟು ಜನ infrastructure ಗೆ ಶೇಖರಣೆ ಮಾಡಿ ಇಡಲಿಲ್ಲ. ಈಗ ಎಲ್ಲರಿಗೂ ತೊಂದರೆ ಬಂದಿದೆ. ಹಾಗಾಗಿ ಹೆಚ್ಚು ಹಣವನ್ನು infrastructure ಗೆ ಹಾಕಬೇಕಾಗಿರುವಂಥ ಅನಿವಾರ್ಯತೆ ಇದೆ. ನಾವು ಇರ ಬಗ್ಗೆ immediate ಆಗಿ ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕಾದಾಗ, ಈಗ 3 ದಿವಸಗಳು ಇರುವಂಥದ್ದನ್ನು 5 ದಿವಸಗಳಿಗೆ ಮಾಡಬೇಕೆನ್ನುವುದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾವು ಈ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಒಪ್ಪಿಸುವಂಥ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಇದರ ಜೊತೆಗೆ ಮಾನ್ಯ ಲಕ್ಷ್ಮಣ ಸವದಿಯವರು ಕೆಲವು ಸಲಹೆಗಳನ್ನು ಕೊಟ್ಟರು, ಅದು ಏನೆಂದರೆ, ನೀವು ಅಲ್ಲೆ ಹಾಲನ್ನು ಕೊಡುವುದಾದರೆ, packing cost ಎಲ್ಲಾ ಉಳಿಯುತ್ತದೆಂದು ಹೇಳಿದರು, ಇದು ಒಳ್ಳೆಯ ಸಲಹೆಯಾಗಿದೆ. ಇಲ್ಲಿ ಏನಾಗುತ್ತದೆಂದರೆ, ಯಾವ ಊರಿನಲ್ಲಿ ಡೈರಿ ಇರುತ್ತದೋ, ಅಂಥ ಕಡೆಗಳಲ್ಲಿ ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಬೇರೆ ಕಡೆಗಳಲ್ಲಿ ಆಗುವುದಿಲ್ಲ. ಆದರೆ ನಮ್ಮ Education Department ನವರು ಸ್ಕೂಲ್‌ಗಳಿಗೆ ಕಳುಹಿಸುವ ಸಾಲಿನಲ್ಲಿ adulteration ಆಗಿ, ಇನ್ನೊಂದು ಏನಾದರೂ problem ಆಗಿ, ಮಕ್ಕಳ ಮೇಲೆ ಏನಾದರೂ ಪರಿಣಾಮ ಬೀರಬಹುದೆಂಬ ಕಾರಣಕ್ಕೋಸ್ಕರ ಅವರು ಒಪ್ಪುತ್ತಿಲ್ಲ. ನವು ಆ ಪ್ರಯತ್ನವನ್ನೂ ಕೂಡ ಮಾಡಿದ್ದೇವೆ. ಉದಾಹರಣೆಗೆ ನಮ್ಮ ಜಿಲ್ಲೆಯನ್ನೇ ತಗದುಕೊಳ್ಳುವುದಾದರ, 254 ಸೂಸ್ಯಟಗಳವ, ಈ 254 ಸೂಸ್ಯಟಗಳಲ್ಲಿ ನಾವು ಎಲ್ಲಾ ಪಂಚಾಯಿತಿಗಳನ್ನು cover ಮಾಡುವುದಕ್ಕೆ ಆಗುತ್ತದೆ. ಆದರೆ Education Department ನವರು ಒಪ್ಪುತ್ತಿಲ್ಲ. ಇವೆಲ್ಲಾ ಸಮಸ್ಯೆಗಳಿವೆ,

ಇವುಗಳು ತಮಗೆ ಅರ್ಥವಾಗಿದೆ. ಮಾನ್ಯ ರೇವಣ್ಣನವರು ಬಹಳ ಮುಖ್ಯವಾಗಿ ಹೇಳುತ್ತಿರುವಂಥದ್ದು ಏನೆಂದರೆ, ಈಗ ನಷ್ಟವಾಗುತ್ತಿರುವಂಥ ಡೈರಿಗಳಿಗೆ ಸ್ವಲ್ಪ ಹಣವನ್ನು ಕೊಡಿ ಎಂದು ಹೇಳಿದ್ದಾರೆ. ಈ ಹಿಂದೆ ಸರ್ಕಾರಿ ಆದೇಶವೂ ಆಗಿದೆ, ಪ್ರಸ್ತಾವನೆಯನ್ನು ಕೂಡ ಎಲ್ಲಾ ಯೂನಿಯನ್‌ಗಳು ಕಳುಹಿಸಿದ್ದಾರೆ. ಅದಕ್ಕೆ ಹಣವನ್ನು ಕೊಡುವುದರ ಬಗ್ಗೆ ಸರ್ಕಾರವೂ ಸಹ ಗಂಭೀರವಾಗಿ ಯೋಚನೆ ಮಾಡುತ್ತಿದ್ದೆಯೆಂಬ ಮಾತನ್ನು ಹೇಳುತ್ತೇನೆ. ಎಲ್ಲಾ ಸಮಸ್ಯೆಗಳು ಕೂಡ ನಮಗೆ ಗೊತ್ತಿರುವಂಥದ್ದು. Food Safety Act ಪ್ರಕಾರ, Supreme Court judgement ಪ್ರಕಾರ ಈಗಾಗಲೇ ನಾನು ನಾಲ್ಕೈದು ಸಭೆಗಳನ್ನು ಮಾಡಿದ್ದೇನೆ. ಅದು Health Department, Food Department, Animal Husbandry Department ಈ ಎಲ್ಲಾ ಇಲಾಖೆಗಳನ್ನು ಸೇರಿಸಿ ಸಭೆ ಮಾಡಿದ್ದೇನೆ. ನಾವು Act ಅನ್ನು amend ಮಾಡುವ ಬಗ್ಗೆಯೂ ಕೂಡ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಈಗ milk adulteration ಆದಂಥ ಸಂದರ್ಭದಲ್ಲಿ capital punishment ಕೊಡಬೇಕೆಂದು Supreme Court ಹೇಳಿದೆ. ಆ ಕಾರಣಕ್ಕೋಸ್ಕರ ಅಮೆಂಡ್‌ಮೆಂಡ್ ಮಾಡುವುದರ ಬಗ್ಗೆಯೂ ಮೂರ್‍ನಾಕು ಸಭೆಗಳನ್ನು ಮಾಡಿದ್ದೇವೆ. ಅದರ ಬಗ್ಗೆಯೂ ನಾವು ಯೋಚನೆ ಮಾಡುತ್ತಿದ್ದೇವೆ. ನಾವು ಯಾವುದೇ ರೀತಿಯಲ್ಲೂ milk holiday ಕೊಡಬಾರದೆಂಬ ಕಾರಣಕ್ಕೋಸ್ಕರ ಎಲ್ಲಾ ರೀತಿಯ ಯಾವುದೇ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಮತ್ತೆ ನಾವು ಉತ್ತರ ಕೊಟ್ಟಿರುವಂಥದ್ದು ಅಷ್ಟಕ್ಕೇ ಅಲ್ಲ, ಇನ್ನು ಇಲ್ಲಿ ಉತ್ತರ ಕೊಡದೇ ಇರುವಂಥ ಕೆಲವು ವಿಚಾರಗಳ ಬಗ್ಗೆಯೂ ನಾವು ಚರ್ಚೆ ಮಾಡಿದ್ದೇವೆ. ಅದಕ್ಕೆ ಎಲ್ಲಾ ರೀತಿಯಲ್ಲೂ ರೈತರ ಹಿತದೃಷ್ಟಿಯಿಂದ ಮತ್ತು ಯೂನಿಯನ್ ಹಿತದೃಷ್ಟಿಯಿಂದ ನಾವು ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸುತ್ತೇವೆಂಬ ಮಾತನ್ನು ಹೇಳುತ್ತೇನೆ. ಕಳೆದ ಎರಡು ತಿಂಗಳಲ್ಲಿ ಹಾಲನ್ನು ಹೈದರಾಬಾದ್‌ನಲ್ಲಿ ಮಾರ್ಕೆಟ್ ಮಾಡಬೇಕೆಂದು ಪ್ರಯತ್ನ ಪಟ್ಟೆವು. ಇವತ್ತು ನಾವು ಎರಡು ತಿಂಗಳಲ್ಲಿ 60,000 ಲೀಟರ್ ಹಾಲನ್ನು per day ಖರ್ಚು ಮಾಡುತ್ತಿದ್ದೇವೆ. ಅವರ ಡಿಮಾಂಡ್ ಎಮ್ಮೆ ಹಾಲು

ಒಂದು ಲಕ್ಷ ಲೀಟರ್ ಇದೆ, ಬೆಳಗಾಂನಲ್ಲಿ ಬರುವಂಥ ಸಂಪೂರ್ಣವಾಗಿ ಎಲ್ಲಾ ಎಮ್ಮೆ ಹಾಲನ್ನು ಹೈದರಾಬಾದ್‌ಗೆ ಕೊಡುತ್ತಿದ್ದೇವೆ, ಅಲ್ಲಿ ಅಷ್ಟು ಡಿಮಾಂಡ್ ಇದೆ.

ಶ್ರೀ ಹೆಚ್.ಡಿ. ರೇವಣ್ಣ:- ಅಲ್ಲಿ ಒಂದು ಲೀಟರ್‌ಗೆ ಹಣ ಎಷ್ಟು ಕೊಡುತ್ತಾರೆ? ಅಲ್ಲಿ 23 ರೂ. ಗಳಿಗೆ ಮಾರಾಟವಾಗುತ್ತಿದೆ, ನಾವು 15,000 ಲೀಟರ್ ಹಾಲನ್ನು ಕಳುಹಿಸುತ್ತಿದ್ದೇವೆ. ತಾವು ಒಕ್ಕೂಟದವರು ಏನೂ ಮಾಡಿಲ್ಲವೆಂದು ಹೇಳಿದ್ದೀರಿ, ನಮ್ಮ ಒಕ್ಕೂಟದಲ್ಲಿ 55 ಕೋಟಿ ರೂ. ಗಳಲ್ಲಿ ಪ್ಲಾಂಟ್ ಹಾಕಿದ್ದೇವೆ, 15 ಕೋಟಿ ರೂ. ಗಳಲ್ಲಿ ಅರಸೀಕೆರೆಯಲ್ಲಿ ಪ್ಲಾಂಟ್ ಹಾಕಿದ್ದೇವೆ, 25 ಕೋಟಿ ರೂ. ಗಳಲ್ಲಿ ಚನ್ನರಾಯಪಟ್ಟಣದಲ್ಲಿ ಪ್ಲಾಂಟ್ ಹಾಕಿದ್ದೇವೆ. ತಾವು ಒಕ್ಕೂಟಗಳು ಏನು ಮಾಡೇ ಇಲ್ಲವೆಂದು ಹೇಳಿದಿರಲ್ಲಾ, ಸರ್ಕಾರದಿಂದ ಹತ್ತು ಪೈಸೆ ಇಲ್ಲ.

ಅಧ್ಯಕ್ಷರು:- ನೀವು ಒಬ್ಬರು ಮಾಡಿದ್ದೀರಿ, ಬಾಕಿಯವರು ಏನೂ ಮಾಡಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:- ಅವರು ಹೇಳಿದರಲ್ಲಾ, ಅದಕ್ಕೇ ನಾನು ಹೇಳಿದೆ, ನಮ್ಮ ಒಕ್ಕೂಟಗಳಿಗೆ ಏನೂ ಕೊಡದೇ ನಮ್ಮ ಹಣದಲ್ಲಿ 25 ಕೋಟಿ ರೂ. ಗಳಲ್ಲಿ ಚನ್ನರಾಯಪಟ್ಟನದಲ್ಲಿ ಪ್ಲಾಂಟ್ ಹಾಕಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ:- ಹೌದು, ಮಾನ್ಯ ರೇವಣ್ಣನವರೆ, ತಾವು 10 ವರ್ಷಗಳು ಅಧ್ಯಕ್ಷರಾಗಿ ಇದ್ದುದರಿಂದ ಹಾಸನಕ್ಕೆ ಮೂಲಭೂತ ಸೌಕರ್ಯಗಳು ಏನೇನು ಬೇಕೋ, ಅದೆಲ್ಲವನ್ನೂ ಮಾಡಿಕೊಂಡಿದ್ದೀರಿ. ನಿಮ್ಮ ಹಾಗೆ ಎಲ್ಲರೂ ಆಗಿದ್ದರೆ ಮಾಡುತ್ತಿತ್ತೋ ಏನೋ ಗೊತ್ತಿಲ್ಲ, ನೀವು ಮಾಡಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ತಾವು ಇಲ್ಲಿಂದ ಗುಜರಾತ್‌ವರೆಗೂ ಇದ್ದಂಥ ಸಂದರ್ಭದಲ್ಲಿ ದೂರದೃಷ್ಟಿಯನ್ನು ಇಟ್ಟುಕೊಂಡು ಮಾಡಿದ್ದಾರೆ. ಅಲ್ಲಿ ಅಷ್ಟು ಸಮಸ್ಯೆ ಆಗಿಲ್ಲ, ಆದರೆ ಬೇರೆ ಕಡೆಗಳಲ್ಲಿ ತುಂಬಾ ಸಮಸ್ಯೆಗಳಿವೆ.

ಅಧ್ಯಕ್ಷರು:– ಈಗ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು conversion ಮಾಡುವ ಬಗ್ಗೆ ಒಂದು ಸಲಹೆ ಕೊಟ್ಟರು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಹೇಳುತ್ತೇನೆ. ನಾವು milk product ಅನ್ನು process ಮಾಡಿ ಮಾಡುವುದಕ್ಕೆ 60 products ಅನ್ನು ನಾವು release ಮಾಡಿದ್ದೇವೆ. ಈ 60 product ಗಳೆಂದರೆ ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ರೀತಿಯ sweets ಅನ್ನು ಜನರು ಬಯಸುತ್ತಾರೋ ಅದೇ ರೀತಿಯ ಸ್ವೀಟ್ ಅನ್ನು ಮಾಡಿ, promotion ಮಾಡುವಂಥ ಕೆಲಸವನ್ನು ಮಾಡುತ್ತಿದ್ದೇವೆ, ಹೆಚ್ಚು ಹೆಚ್ಚು outlets ಅನ್ನು ಹಾಕುವಂಥ ಕೆಲಸವನ್ನು ಮಾಡುತ್ತಿದ್ದೇವೆ. ನಾವು sales improve ಮಾಡಬೇಕೆಂದು ಸಾಕಷ್ಟು ತಲೆ ಕೆಡಿಸಿಕೊಂಡು ಮಾಡುತ್ತಿದ್ದೇವೆ. Flexi pack ನಲ್ಲಿ ಮಕ್ಕಳಿಗೆ raw milk ಅನ್ನು ಕೊಡಬೇಕೆನ್ನುವ ಬಗ್ಗೆಯೂ ಕೂಡ, flexi pack units ಅನ್ನು ಸುಮಾರು ಮೂರು ಕಡೆಗಳಲ್ಲಿ ಮಾಡಬಹುದಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ:– ಒಟ್ಟಾರೆ self life ಅನ್ನು ಹೆಚ್ಚಿಗೆ ಮಾಡುವುದಕ್ಕೆ ಪ್ರಾಧಾನ್ಯತೆ ಕೊಡಿ, ಬೇರೆ ರಾಜ್ಯಗಳಲ್ಲಿ ಮಾಡುವುದೇ ಅದು, self life ಹೆಚ್ಚಿಗೆ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ:– Flexi pack ನಲ್ಲಿ self life minimum one month ಇರುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:– ಕೆ.ಎಂ.ಎಫ್. ನಿಂದ ನಿಮಗೆ ಬಂದಿರುವ raw milk ಅನ್ನು self lie ಗೆ ಮಾಡಿರುವ conversion ಬಹಳ ಕಡಿಮೆ ಇದೆ. ಬೇರೆ ರಾಜ್ಯದಲ್ಲಿ ಅದು ಜಾಸ್ತಿ ಇದೆ. ಅದಕ್ಕೆ ಲಕ್ಷ್ಯ ಕೊಡಿ ಎಂದು ನಾನು ಅಷ್ಟೇ ಹೇಳುತ್ತಿರುವುದು.

ಶ್ರೀ ಟಿ.ಬಿ ಜಯಚಂದ್ರ:– ಮಾನ್ಯ ಅಧ್ಯಕ್ಷರೆ ನಾನು ಹೇಳುತ್ತಿದ್ದೇನೆ Infrastructure ಬಗ್ಗೆ ನಾವು ಏನೇ ಮಾಡಿದರು ನಾವು ಅದಕ್ಕೆ ಮೈಸೂರು ಮತ್ತು ಚಾಮರಾಜನಗರದಲ್ಲಿ 200–200 ಕೋಟಿ ರೂ. ಗಳಲ್ಲಿ

ಮಾಡಿದ್ದೇವೆ. ನಾವು ಅದಕ್ಕೆ ಯಾವ್ಯಾವ ರೀತಿಯಲ್ಲಿ ದುಡ್ಡನ್ನು adjust ಮಾಡಿ 200 ಕೋಟಿ ರೂ. ಗಳನ್ನು ಹಾಕಿ ಕೆಲಸ ಪ್ರಾರಂಭ ಮಾಡುವಂಥದ್ದನ್ನು ಮಾಡುತ್ತಿದ್ದೇವೆ. ಒಂದೇ ಸಲ production ಜಾಸ್ತಿ ಆಯಿತು. ಅದನ್ನು consume ಮಾತಕ್ಕಂಥದ್ದು, ಆಮೇಲೆ ನಮ್ಮ powder ಏಕೆ stock ಇದೆ ಎಂದರೆ export stop ಆಗಿ ಹೋಯಿತು. ಎಲ್ಲಾ ರಾಜ್ಯದಲ್ಲಿಯೂ ಕೂಡ production ಜಾಸ್ತಿಯಾಗಿ ಹೋಗಿದೆ. ಮತ್ತೆ 100% export stop ಆಗಿ ಹೋಗಿದೆ. ಹೀಗಾಗಿ ನಮ್ಮ ಬೆಣ್ಣೆ ಮತ್ತು ಪೌಡರ್ stock ಉಳಿಯುವುದಕ್ಕೂ ಕೂಡ ಕಾರಣವಾಗಿದೆ. ಬಹುಶಃ ಇದು ಒಂದೇ ಅಲ್ಲ ಎಲ್ಲಾ ಡೈರಿಗಳಲ್ಲಿ ಎಲ್ಲಾ ರಾಜ್ಯಗಳಲ್ಲಿ ಈ ಪರಿಸ್ಥಿತಿ ಇದೆ. ತಮಿಳುನಾಡಿನಲ್ಲಿ ಅವರು process ಮಾಡತಕ್ಕಂಥದ್ದು 25 ಲಕ್ಷ ಲೀಟರ್. ಈಗಾಗಲೇ ಹಾಲನ್ನು ತಂದು ರೈತರು ಬೀದಿಗೆ ಚೆಲ್ಲುತ್ತಿದ್ದಾರೆ. ನಮ್ಮಲ್ಲಿ 73 ಲಕ್ಷ ಆದರೂ ಕೂಡ ನಾವು ರೈತರು ಬೀದಿಗೆ ಚೆಲ್ಲುವಂಥ ಮಟ್ಟಿಗೆ ನಾವು ಬಿಟ್ಟಿಲ್ಲ. ಏಕೆಂದರೆ, ನಮ್ಮಲ್ಲಿ infrastructure ಮಾಡುವುದಕ್ಕೆ ಇನ್ನೂ ಕೂಡ ಅವಕಾಶ ಇದೆ. ಮಾನ್ಯ ರವಿಯವರು ಖಾಸಗಿ ವಲಯದಲ್ಲಿ ಪೌಡರ್ ಮಾಡುವುದಕ್ಕೆ ಮಾಡಬೇಕೆಂದು ಹೇಳಿದರು.

ಶ್ರೀ ಹೆಚ್.ಡಿ. ರೇವಣ್ಣ:- ಖಾಸಗಿ ವಲಯಕ್ಕೆ ಕೊಟ್ಟರೆ ಮುಳುಗಿ ಹೋಗುತ್ತವೆ.

ಶ್ರೀ ಟಿ.ಬಿ. ಜಯಚಂದ್ರ:- ಪೌಡರ್ ಅನ್ನು ಬಾರಾಮತಿಗೆ ಕಳುಹಿಸಬಹುದು. Co-operative sector ನಲ್ಲಿ ನೀವೇ ಮಾಡಿ ಯಾರು ಬೇಡ ಅಂದರು.

ಶ್ರೀ ಹೆಚ್.ಡಿ. ರೇವಣ್ಣ:- ನಾವು ಮಾಡುವುದಕ್ಕೆ ರೆಡಿ ಇದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ:- ಬಾರಾಮತಿ, ತಮಿಳುನಾಡು, ಹೈದ್ರಾಬಾದಿಗೆ ಪೌಡರಿಗೋಸ್ಕರ ಕಳುಹಿಸುತ್ತೇವೆ. ನಮ್ಮ ರಾಜ್ಯದಲ್ಲಿ ಯಾರಾದರೂ ಬಂದರೆ ಕೊಡುವುದಿಲ್ಲವೆನ್ನುವ ಪ್ರಶ್ನೆ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ:– ತಾವು ಒಂದು ನಿಮಿಷ ಯೀಲ್ಡ್ ಆಗಬೇಕು. ಚನ್ನರಾಯಪಟ್ಟಣದಲ್ಲಿ ಸುಮಾರು 100 ಟನ್ ಪೌಡರ್ ಘಟಕವನ್ನು 80 ಕೋಟಿ ರೂ. ಗಳಿಗೆ ಮಾನ್ಯ ಶರದ್ ಪವಾರ್‌ರವರ ಕಡೆಯಿಂದ ಮಾಡಿಸಿ ಇವತ್ತು 150 ಕೋಟಿ ರೂ. ಗಳ ಪ್ಲಾಂಟ್ ಅನ್ನು ಚನ್ನರಾಯಪಟ್ಟಣದಲ್ಲಿ ಪೌಡರ್ ಘಟಕವನ್ನು ಮಾಡಿಸಿದ್ದೇವೆ. ಮಾನ್ಯ ದೇವೇಗೌಡರನ್ನು ಹಿಡಿದು ಮಾಡಿಸಿದ್ದೇವೆ.

ಅಧ್ಯಕ್ಷರು:– ಆಯಿತು, ಈಗ ಏನು ಮಾಡಬೇಕು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:– ನಾನು ಹೇಳುತ್ತಿರುವುದು ಇಷ್ಟೆ. ಮಾನ್ಯ ಜಗದೀಶ್‌ಶೆಟ್ಟರ್ ರವರು ಒಂದು ಆರ್ಡರ್ ಅನ್ನು 2011 ರಲ್ಲಿ ಮಾಡಿದ್ದಾರೆ.

ಅಧ್ಯಕ್ಷರು:– ಸಾಲ ಕೊಡಿ ಎಂದು.

ಶ್ರೀ ಹೆಚ್.ಡಿ. ರೇವಣ್ಣ:– ಸಾಲ ಕೊಡುವುದು ಮತ್ತು 50% subsidy ಕೊಡುವುದು ಹಾಗೂ ಬಡ್ಡಿ ರಹಿತ ಸಾಲ ಕೊಟ್ಟು, ನೀವು ರೈತರನ್ನು ಉಳಿಸಿ. ನಿಮಗೆ ಇನ್ನೂ ಅವಕಾಶ ಇದೆ, ನೀವು ಚಾಮರಾಜನಗರಕ್ಕೆ ಬರುವುದು ಹೋಗುವುದು, ನೀವು ಎರಡು–ಮೂರು ವರ್ಷಕ್ಕೆ ಒಂದು ಸಲ ಬಂದು ಹೋದರೆ, ರೈತರು ಮುಳುಗಿ ಹೋಗಿರುತ್ತಾರೆ. ನೀವು ಮೊದಲು ರೈತರನ್ನು ಉಳಿಸಿ. First priority ರೈತರನ್ನು ಉಳಿಸುವುದಕ್ಕೆ ಮಾಡಿ. ಮಾನ್ಯ ಜಯಚಂದ್ರರವರು ಇದನ್ನು ಗಂಭೀರವಾಗಿ ಚಿಂತನೆ ಮಾಡಬೇಕು. ಬೆಂಗಳೂರಿಗೆ, ನಿಮಗೆ ತೊಂದರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ರೈತರು ಹಾಲನ್ನು ಬೀದಿಗೆ ಚೆಲ್ಲುವುದಕ್ಕೆ ನಾವು ಇನ್ನೂ ಬಿಟ್ಟಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:– ನಾವು ಒಕ್ಕೂಟಗಳನ್ನು ಮಾಡದೇ ಹೋಗಿದ್ದರೆ, ನಮಗೆ 5 ಲಕ್ಷ ಸಿಗುತ್ತಿತ್ತು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಅವರು ಏನು ಕಳಕಳಿಯನ್ನು ವ್ಯಕ್ತ ಮಾಡಿದ್ದಾರೆ ಅದು ನಮಗೆ ಅರ್ಥವಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ:- ನಿಮಗೆ ಈ ಎರಡು ಆರ್ಡರ್‌ಗಳನ್ನು ಕಳುಹಿಸಿ ಕೊಡುತ್ತೇನೆ ದಯಮಾಡಿ ನೋಡಿ ಸ್ವಾಮಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ನಾವು ನಮ್ಮ ಇತಿಮಿತಿಯಲ್ಲಿ ಈಗ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅವರ ಬೇಡಿಕೆಗಳು ಏನಿದೆ.

ಅಧ್ಯಕ್ಷರು:- ನೀವು ಹೇಳಿದ್ದೀರಲ್ಲಾ, ನಾನು ಅದನ್ನೇ ಹೇಳುವುದು. ಇದು ಒಳ್ಳೆಯ ಕತೆಯಾಯಿತಲ್ಲಾ. ಅವರು ಸರ್ಕಾರ ನಡೆಸುವವರು ಹೇಳಿದ್ದಾರೆ, ನೀವು ಸರ್ಕಾರಕ್ಕೆ ಹೇಳಿದ್ದೀರಿ, ಅದರ ಬಗ್ಗೆ ವಿಚಾರ ಮಾಡಿ ತೀರ್ಮಾನ ಮಾಡುತ್ತಾರೆ. ಅದು ಏನು ನೋಡಿ ಬೇಗ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳುತ್ತೇವೆ.

ಶ್ರೀ ಎಂ.ಪಿ. ರವೀಂದ್ರ:- ಮಾನ್ಯ ಅಧ್ಯಕ್ಷರೆ, ಕೆಲವು ಯೂನಿಯನ್‌ಗಳಿಗೆ ಸಾಮರ್ಥ್ಯ ಇರುತ್ತದೆ ಅವರು conversion ಸ್ವಂತ ಮಾಡಿಕೊಳ್ಳಬಹುದು. ಉದಾಹರಣೆಗೆ ರಾಯಚೂರು, ಕೊಪ್ಪಳ, ಬಳ್ಳಾರಿಗೆ ಕೇವಲ 2.10 ಲಕ್ಷ ಲೀಟರ್ ಹಾಲು ಬರುತ್ತದೆ. ನಾವು ಯೂನಿಯನ್ ವತಿಯಿಂದ conversion plant ಹಾಕಿದರೆ ಅದು feasible ಆಗುವುದಿಲ್ಲ. ಹಾಗಾಗಿ ಏನು ಮಾಡಬೇಕೆಂದರೆ, ನಾವು ಮೂರು-ನಾಲ್ಕು ಯೂನಿಯನ್‌ಗಳ ಮಧ್ಯದ ಜಾಗದಲ್ಲಿ ಸರ್ಕಾರದ ವತಿಯಿಂದ, ಯೂನಿಯನ್ ವತಿಯಿಂದ ಅಥವಾ ಕೆ.ಎಂ.ಎಫ್. ವತಿಯಿಂದಲಾದರೂ ಮಾಡಬೇಕಾಗುತ್ತದೆ. ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲದ ಸಂದರ್ಭದಲ್ಲಿ ಇವತ್ತಿನ ಸಧ್ಯದ ಪರಿಸ್ಥಿತಿಯಲ್ಲಿ ಖಾಸಗಿಯವರಿಗೆ ಕಮಿಟ್‌ಮೆಂಟ್ ಕೊಟ್ಟರೆ, per day ಒಂದು ಲಕ್ಷ ಲೀಟರ್ ನಿಮಗೆ ನಾವು ಕೊಡುತ್ತೇವೆ, ನಿಮಗೆ ಈ ರೇಟ್ ಕೊಡುತ್ತೇವೆ, 3 ಅಥವಾ 5 ವರ್ಷಕ್ಕೆ ಕಮಿಟ್‌ಮೆಂಟ್

ಕೊಡುತ್ತೇವೆಂದು ಹೇಳಿದರೆ, ಖಾಸಗಿಯವರು ಬಂದರೆ ಅವರು ನಿರ್ವಹಣೆ ಮಾಡಿ ಕೊಡುತ್ತಾರೆ.

ಅಧ್ಯಕ್ಷರು:- ಖಾಸಗಿಯವರು ಬಂದರೆ ಪರ್ಮಿಷನ್ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:- ಇದರ ಬಗ್ಗೆ ನಾವು ಈಗಾಗಲೇ ಚಿಂತನೆ ಮಾಡುತ್ತಿದ್ದೇವೆ. ಸಹಕಾರಿ ಕ್ಷೇತ್ರದಲ್ಲಾಗಲಿ ಖಾಸಗಿ ವಲಯದಲ್ಲಾಗಲಿ ಪೌಡರ್ ಅನ್ನು conversion ಮಾಡುತ್ತೇವೆಂದು ಮುಂದೆ ಬಂದರೆ ಅದಕ್ಕೆ ಪ್ರೋತ್ಸಾಹ ಮಾಡಬೇಕು ಎನ್ನುವುದರ ಬಗ್ಗೆ ಕೂಡ ನಾವು ಚಿಂತನೆ ಮಾಡುತ್ತಿದ್ದೇವೆ.

ಶ್ರೀ ಎಂ.ಪಿ. ರವೀಂದ್ರ:- ಸರ್ಕಾರ ಸಬ್ಸಿಡಿ ಇನ್ನೊಂದು ಏನಾದರೂ ಸೌಲಭ್ಯ ಕೊಟ್ಟರೆ ಖಂಡಿತವಾಗಿ ಖಾಸಗಿ ಕಂಪನಿಯವರು ಮುಂದೆ ಬರುತ್ತಾರೆ.

ಅಧ್ಯಕ್ಷರು:- ಅಂಥವರು ಇದ್ದರೆ ನಾಳೆ ಕರೆದುಕೊಂಡು ಬನ್ನಿ.

ಶ್ರೀ ಟಿ.ಬಿ. ಜಯಚಂದ್ರ:- ನೀವು ಕೆ.ಎಂ.ಎಫ್. ಡೈರೆಕ್ಟರ್ ಆಗಿದ್ದೀರಿ. ಅದರ ಬಗ್ಗೆ ಯೋಚನೆ ಮಾಡಿ ಅದನ್ನು ನಿಮ್ಮ ಹಂತದಲ್ಲಿ ಕೆಲಸವನ್ನು ಮಾಡಬೇಕು.

ಶ್ರೀ ಎಂ.ಪಿ. ರವೀಂದ್ರ:- ನಾವು ಹೊಸದಾಗಿ ಬಂದಿರುವುದರಿಂದ ಮಾನ್ಯ ರೇವಣ್ಣನವರಷ್ಟು ಅನುಭವ ಇಲ್ಲ. ನಮಗೆ ತಿಳಿದಿರುವಷ್ಟು ವಿಚಾರದಲ್ಲಿ ಕೆಲವರು ಖಾಸಗಿಯವರು ಮಾಡುವುದಕ್ಕೆ ಮುಂದೆ ಬಂದಿದ್ದಾರೆ, ಅದಕ್ಕೆ ಪ್ರೋತ್ಸಾಹ ಕೊಟ್ಟರೆ ಒಳ್ಳೆಯದು.

ಶ್ರೀ ಟಿ.ಬಿ. ಜಯಚಂದ್ರ:- ಅವರೆಲ್ಲರ ಸಲಹೆಯನ್ನು ನಾವು ಪರಿಶೀಲನೆ ಮಾಡುತ್ತೇವೆ. ಆದರೆ ಯಾವುದೇ ರೀತಿಯಲ್ಲಿಯೂ ಕೂಡ milk holiday ಕೊಡದೇ ಇರುವ ರೀತಿಯಲ್ಲಿ ಮತ್ತು ಯೂನಿಯನ್‌ಗಳ ನೆರವಿಗೆ ಬರಬೇಕು ಎನ್ನುವುದರ ಬಗ್ಗೆ ಕೂಡ ನಾವು ದೀರ್ಘವಾಗಿ ಯೋಚನೆ ಮಾಡುತ್ತೇವೆ.

ಆದಷ್ಟು ಬೇಗ ಅವರ ತೀರ್ಮಾನಕ್ಕೆ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ರೈತರಿಗೆ ದರ ಕೊಡುವುದು.

ಅಧ್ಯಕ್ಷರು:– ಸಾಕು. ಈಗ ಸದನವನ್ನು ಮುಂದೂಡಿ ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 7 ಗಂಟೆ 56 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 15.07.2015 ರಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)